ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue:84 ಸಂಚಿಕೆ: 84 | Date:14-04-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

# ಸಂಪುಟ ಪುನಾರಚನೆಗೆ ಡಿಕೆಶಿ ವಿರೋಧ:

## ದಿಲ್ಲಿಗೆ ಹೋದ ಶಾಸಕರಿಗೆ ಖಡಕ್ ಎಚ್ಚರಿಕೆ ಸಂದೇಶ



ನಾಯಕತ್ವ ಗೊಂದಲ, ದಾವಣಗೆರೆ ಬೈ ಎಲೆಕ್ಷನ್ ಜಟಾಪಟಿ ನಡುವೆ ಹಿರಿಯ ಶಾಸಕರು ಮಂತ್ರಿಗಿರಿ ಬೇಡಿಕೆಯೊಂದಿಗೆ ಇಂದು (ಏಪ್ರಿಲ್ 12) ದೆಹಲಿ ಫ್ಲೈಟ್ ಹತ್ತಿದ್ದಾರೆ. ಎರಡಕ್ಕಿಂತ ಹೆಚ್ಚು ಬಾರಿ ಗೆದ್ದಿರುವ ಸುಮಾರು 25ಕ್ಕೂ ಶಾಸಕರು ಮಂತ್ರಿಗಿರಿಗೆ ಹಕ್ಕೊತ್ತಾಯ ಮಾಡಲು ದೆಹಲಿಗೆ ತೆರಳಿದ್ದಾರೆ. ಆದ್ರೆ, ಇತ್ತ ಡಿಸಿಎಂ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಗರಂ ಆಗಿದ್ದು, ಶಾಸಕರಿಗೆ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

ಕರ್ನಾಟಕದಲ್ಲಿ ಎರಡು ಉಪ ಚುನಾವಣೆಗಳು ಮುಕ್ತಾಯವಾದ ಬೆನ್ನಲ್ಲೆ ಸಚಿವ ಸಂಪುಟ ಪುನಾರಚನೆ)ಚಟುವಟಿಕೆಗಳು ಜೋರಾಗಿವೆ. ಸರ್ಕಾರವೂ ಮೂರು ವರ್ಷ ಪೂರೈಸುತ್ತಿರುವ ಹಿನ್ನೆಲೆ ನಮಗೂ ಸಚಿವ ಸ್ಥಾನ ಕೊಡಿ ಎಂದು 25 ಕ್ಕೂ ಅಧಿಕ ಶಾಸಕರು ಹೈಕಮಾಂಡ್ ಭೇಟಿಗೆ ದೆಹಲಿಗೆ ತೆರಳಿದ್ದಾರೆ. ಆದ್ರೆ, ಶಾಸಕರ ದೆಹಲಿ ಯಾತ್ರೆಗೆ ಪರೋಕ್ಷವಾಗಿ ಸಿಎಂ ಸಿದ್ದರಾಮಯ್ಯ ಬೆಂಬಲಿಸಿದರೆ ಮತ್ತೊಂದೆಡೆ ಡಿಸಿಎಂ ಡಿಕೆ ಶಿವಕುಮಾರ್ ಗರಂ ಆಗಿದ್ದಾರೆ. ಅಲ್ಲದೇ ಖಡಕ್ ಎಚ್ಚರಿಕೆಯನ್ನೂ ಸಹ ನೀಡಿದ್ದು, ಇದು ರಾಜ್ಯ ಕಾಂಗ್ರೆಸ್‌ನಲ್ಲಿ ಭಾರೀ ಸಂಚಲನಕ್ಕೆ ಕಾರಣವಾಗಿದೆ.

### ಪಕ್ಷದ ಶಿಸ್ತನ್ನು ಯಾರೂ ಮೀರಬೇಡಿ

ಸಚಿವ ಸ್ಥಾನಕ್ಕಾಗಿ ಆಗ್ರಹಿಸಿ ಶಾಸಕರ ದೆಹಲಿ ಪ್ರವಾಸ ವಿಚಾರವಾಗಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಡಿಕೆ ಶಿವಕುಮಾರ್, ಪಕ್ಷದ ಶಿಸ್ತನ್ನು ಯಾರೂ ಮೀರಬೇಡಿ. ಪಕ್ಷದ ಚೌಕಟ್ಟಿನ ಒಳಗೆ ಎಲ್ಲಾ ಶಾಸಕರು ಮಾತನಾಡಬೇಕು. ಕೆಲವರು ಏನೇನು ಮಾತನಾಡಿದ್ದಾರೋ ಎಲ್ಲವನ್ನೂ ಗಮನಿಸಿದ್ದೇನೆ. ಆದರೆ ಮೀಡಿಯಾ ನಿಮ್ಮ ಭವಿಷ್ಯ ಅಲ್ಲ, ಪಾರ್ಟಿ ನಿಮ್ಮ ಭವಿಷ್ಯ. ಪಾರ್ಟಿಯಲ್ಲೇ ಎಲ್ಲರ ಭವಿಷ್ಯವಿದೆ, ಪಕ್ಷದ ಚೌಕಟ್ಟಿನೊಳಗೆ ಇರಬೇಕು. ಇದು ಸಂಪುಟ ಪುನಾರಚನೆ ಕೇಳುವ ಟೈಂ ಅಲ್ಲ. ಈಗ ಮಂತ್ರಿ ಮಾಡೋ ಟೈಂ ಅಲ್ಲ, ಮೊದಲು ಚುನಾವಣೆ ಮಾಡೋಣ ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

### ಶಾಸಕರ ದೆಹಲಿ ದಂಡಯಾತ್ರೆ ಬೆಂಬಲಿಸಿದ ಸಿಎಂ

ಹೌದು ಅತ್ತ ಡಿಕೆ ಶಿವಕುಮಾರ್ ಸಚಿವ ಪುನಾರಚಣೆಗೆ ವಿರೋಧ ವ್ಯಕ್ತಪಡಿಸಿದ್ದು, ದೆಹಲಿಗೆ ತೆರಳಿದ ಶಾಸಕರಿಗೆ ಖಡಕ್ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ಆದ್ರೆ, ಇದಕ್ಕೂ ಮೊದಲು ಮಾತನಾಡಿರುವ ಸಿಎಂ ಸಿದ್ದರಾಮಯ್ಯ, ಸಂಪುಟ ಪುನಾರಚನೆ ಸಂಬಂಧ ದೆಹಲಿಗೆ ತೆರಳಿದ ಶಾಸಕರ ಪರವಾಗಿ ಮಾತನಾಡಿದ್ದಾರೆ

ಶಾಸಕರ ನಡೆ ಬಗ್ಗೆ ನಿನ್ನೆ(ಏಪ್ರಿಲ್ 12) ಚಿಕ್ಕಮಗಳೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ದೆಹಲಿಗೆ ಹೋದ್ರೆ ತಪ್ಪೇನು, ಬೇಡ ಅಂದೋರು ಯಾರು? ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚೆ ಮಾಡಿದ್ದೇವೆ. ಎರಡೂವರೆ ವರ್ಷಗಳ ಬಳಿಕ ಸಂಪುಟ ಪುನಾರಚನೆ ಮಾಡಬೇಕಿತ್ತು. ಪಂಚ ರಾಜ್ಯಗಳ ಚುನಾವಣೆ, ಬೈಎಲೆಕ್ಷನ್‌ನಿಂದ ವಿಳಂಬವಾಗಿದೆ ಎಂದು ಸ್ಪಷ್ಟಪಡಿಸಿದ್ದರು. ಈ ಮೂಲಕ ಸಿದ್ದರಾಮಯ್ಯನವರು ಪರೋಕ್ಷವಾಗಿ ಶಾಸಕರ ದೆಹಲಿ ಯಾತ್ರೆಗೆ ಬೆಂಬಲಿಸಿದ್ದಾರೆ.

### ಮತ್ತೆ ಶುರುವಾಯ್ತಾ ಡಿಕೆಶಿ–ಸಿದ್ದರಾಮಯ್ಯ ಮುಸುಕಿನ ಗುದ್ದಾಟ?

ನಾಯಕತ್ವ ಬದಲಾವಣೆ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ನಡುವೆ ಮುಸುಕಿನ ಗುದ್ದಾಟ ನಡೆಯುತ್ತಲೇ ಇದೆ. ಸಮಯ ಸಂದರ್ಭ ಬಂದಾಗೆಲ್ಲಾ ಡಿಕೆ ಶಿವಕುಮಾರ್ ಪರೋಕ್ಷವಾಗಿ ನಾಯಕತ್ವ ಬದಲಾವಣೆ ಬಗ್ಗೆ ಪ್ರಸ್ತಾಪಿಸುತ್ತಲೇ ಬಂದಿದ್ದಾರೆ. ಸಿಎಂ ಆಗಲೇಬೇಕೆಂದು ಪಟ್ಟು ಹಿಡಿದಿರುವ ಡಿಕೆ ಶಿವಕುಮಾರ್ ಆಗಾಗ ದೆಹಲಿಗೆ ಹೋಗಿರು ಬರುತ್ತಲೇ ಇದ್ದಾರೆ. ಇನ್ನು ಅವರ ಬೆಂಬಲಿಗ ಶಾಸಕರು ಸಹ ನಾಯಕತ್ವ ಬದಲಾವಣೆ ಬಗ್ಗೆಯೂ ಧ್ವನಿ ಎತ್ತುತ್ತಲೇ ಇದ್ದಾರೆ. ಆದ್ರೆ, ಇದೀಗ ಸಂಪುಟ ಪುನಾರಚನೆಗೆ ಡಿಕೆ ಶಿವಕುಮಾರ್ ಆಗಲಿ ಅಥವಾ ಅವರ ಬಣದ ಶಾಸಕರಾಗಲಿ ಯಾವುದೇ ಬೆಂಬಲ ಕೊಡುತ್ತಿಲ್ಲ, ಬದಲಿಗೆ ವಿರೋಧ ವ್ಯಕ್ತಪಡಿಸುತ್ತಿದ್ದು ಭಾರೀ ಚರ್ಚೆಗೆ ಗ್ರಾಸವಾಗಿದೆ.

**ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ**

ಇಂದು ಡಾ: ಬಿ.ಆರ್. ಅಂಬೇಡ್ಕರ್ ಹಾಗೂ ಡಾ: ಬಾಬು ಜಗಜೀವನ್ ರಾಮ್ ಜಯಂತಿ

# ಅಮಾನಿಕೆರೆಯಲ್ಲಿ ಬೋಟ್ ಪೆರೇಡ್, ಧ್ವನಿ ಬೆಳಕು ಕಾರಂಜಿ

ತುಮಕೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಭಾಗಿತ್ವದಲ್ಲಿ ಏಪ್ರಿಲ್ 14ರಂದು ಮಹಾನಗರಪಾಲಿಕೆ ಆವರಣದಲ್ಲಿರುವ ಡಾ: ಬಿ.ಆರ್. ಅಂಬೇಡ್ಕರ್ ಪುತ್ಥಳಿ ಮುಂಭಾಗದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಹಾಗೂ ಡಾ: ಬಾಬು ಜಗಜೀವನ್ ರಾಮ್ ಜಯಂತಿಯನ್ನು ವಿನೂತನವಾಗಿ ಹಾಗೂ ಅದ್ದೂರಿಯಾಗಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ 9.30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಜೀವನ ಚರಿತ್ರೆಯನ್ನೊಳಗೊಂಡ ಟ್ಯಾಬ್ಲುಗಳು ಹಾಗೂ 100 ಜನ ಕಲಾವಿದರನ್ನೊಳಗೊಂಡ ವಿವಿಧ ಕಲಾ ತಂಡಗಳಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಜಾಥಾವು ಮಹಾನಗರ ಪಾಲಿಕೆ ಆವರಣದಿಂದ ಪ್ರಾರಂಭವಾಗಿ ಎಂ.ಜಿ.ರಸ್ತೆ, ಡಿ.ಸಿ.ಕಚೇರಿ, ಅಶೋಕರಸ್ತೆ ಮೂಲಕ ಮಹಾನಗರ ಪಾಲಿಕೆ ಆವರಣ ಸೇರಲಿದೆ.ನಂತರ 11.30 ಗಂಟೆಗೆ ಗೃಹ ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಜಿಲ್ಲೆಯ ಎಲ್ಲಾ ಚುನಾಯಿತಿ ಪ್ರತಿನಿಧಿಗಳಿಂದ ಮಹಾನಗರ ಪಾಲಿಕೆ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವೇದಿಕೆ ಕಾರ್ಯಕ್ರಮ ಪ್ರಾರಂಭವಾಗಲಿದೆ. ಈ ವೇಳೆ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಡಾ. ಅಂಬೇಡ್ಕರ್ ಜೀವನ ಕುರಿತು ಕಲಾವಿದರಿಂದ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ವೇದಿಕೆಯಲ್ಲಿ ಜಿಲ್ಲೆಯಲ್ಲಿ ಶೈಕ್ಷಣಿಕ ವಲಯದಲ್ಲಿ ಸಾಧನೆಗೈದ 10 ವಿದ್ಯಾರ್ಥಿಗಳಿಗೆ ಹಾಗೂ ಜಿಲ್ಲೆಯ ವಿವಿಧ ವಲಯಗಳಲ್ಲಿ ಸಾಧನೆಗೈದ 22 ಸಾಧಕರಿಗೆ ಗೌರವ ಸಲ್ಲಿಸಲಾಗುವುದು.

**ತುಮಕೂರಿನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಬೋಟ್** ಪೆರೇಡ್, ಲೈಟ್ ಅಂಡ್ ಸೌಂಡ್ ಷೋ ಸಂಗೀತ ಕಾರಂಜಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದ್ದು, ಈ ಕಾರ್ಯಕ್ರಮಗಳು ಅಂದು ಸಂಜೆ 6 ಗಂಟೆಗೆ ಅಮಾನಿಕೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದ್ದು, ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಕೋರಲಾಗಿದೆ.







# ಮಹಿಳಾ ಮೀಸಲಾತಿ ಶೇ.33 ಬದಲು 50 ರಷ್ಟು ನೀಡುವುದು ಸೂಕ್ತ : ಶಾಸಕ ಎಸ್.ಆರ್.ಶ್ರೀನಿವಾಸ್

ವರದಿ ಗುಬ್ಬಿ ಭರತ್

ಗುಬ್ಬಿ :ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ನಮ್ಮ ಬೆಂಬಲವಿದೆ. ಆದರೆ ಶೇ.33% ಬದಲು 50% ರಷ್ಟು ನೀಡುವುದು ಒಳ್ಳೆಯದು. ಮಹಿಳೆಯರಿಗೆ ಅವಕಾಶ ಸಿಕ್ಕರೆ ಪ್ರಾಮಾಣಿಕ ಕೆಲಸವನ್ನು ನಿರೀಕ್ಷೆ ಮಾಡಬಹುದು ಎಂದು ರಾಜ್ಯ ಸಾರಿಗೆ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ಆರ್.ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಗುಬ್ಬಿ ಪಟ್ಟಣದ ಬಿಲ್ಲೆಪಾಳ್ಯ ಗ್ರಾಮದಲ್ಲಿ 37 ಲಕ್ಷ ಅನುದಾನದಲ್ಲಿ ರಸ್ತೆ ಕಾಮಗಾರಿ, ಬಲದಂಡೆ ಕೋಡಿ ಚರಂಡಿ ಕಾಮಗಾರಿಗೆ 75 ಲಕ್ಷ, ಬಸವ ನಗರದ ರಸ್ತೆ ಕಾಮಗಾರಿಗೆ 1 ಕೋಟಿ, ಸುಭಾಷ್ ನಗರ ಸೇರಿದಂತೆ ಇನ್ನಿತರ ಕಡೆಗಳಲ್ಲಿ ಅಂಗನವಾಡಿ ಕಟ್ಟಡ ಕಾಮಗಾರಿಗೆ 69 ಲಕ್ಷ ಅನುದಾನ ಮತ್ತು ಪಟ್ಟಣದ ಹೈಟೆಕ್ ಬಸ್ ನಿಲ್ದಾಣ ಕಾಮಗಾರಿಗೆ 9 ಕೋಟಿ ಅನುದಾನದ ಎಲ್ಲಾ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮಹಿಳಾ ಮೀಸಲಾತಿ ಒಟ್ಟಿಗೆ ಜಾರಿಗೊಳ್ಳುವ ಸಾಧ್ಯತೆ ಇದೆ ಎಂದರು.

ಎಲ್ಲಾ ರಂಗದಲ್ಲಿಯೂ ಮಹಿಳೆಯರೇ ಮುಂದೆ ಇದ್ದು ನಮ್ಮ ತಾಲೂಕಿನಲ್ಲಿಯೂ ಮಹಿಳಾ ಅಧಿಕಾರಿಗಳು ಹೆಚ್ಚಾಗಿದ್ದಾರೆ. ಪ್ರಾಮಾಣಿಕ ಕೆಲಸ ಇಲ್ಲಿ ನಡೆದಿದೆ ಎಂದ ಅವರು ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಸರಿಯಿದೆ. 2029 ರ ಸಂಸದರ ಚುನಾವಣೆ ವೇಳೆಗೆ ಮಹಿಳಾ ಮೀಸಲಾತಿ ಜೊತೆಗೆ ಕ್ಷೇತ್ರ ವಿಂಗಡಣೆ ಒಟ್ಟಿಗೆ ಆಗಬೇಕಿದೆ ಎಂದರು.

ಹೈಕಮಾಂಡ್ ಭೇಟಿ ಕೇವಲ ಮಂತ್ರಿಸ್ಥಾನದ ಲಾಭಿ ಅಲ್ಲದೆ ಸಿಎಂ ಕುರ್ಚಿ ಬದಲಾವಣೆಗೆ ನಡೆಯುತ್ತಿರುವ ಒಂದು ಒಳಜಗಳ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾಡಿರುವ ಟೀಕೆಗೆ ಪ್ರತಿಕ್ರಿಯೆ ನೀಡಿದ ಅವರು ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗ ಸಚಿವ ಸ್ಥಾನಕ್ಕೆ ಲಾಭಿ ನಡೆಸಿಲ್ಲವೇ, ಎಷ್ಟು ಮಂದಿ ಸಿಎಂ ಹುದ್ದೆ ಅಲಂಕರಿಸಿದ್ದಾರೆ. ಸಹಜವಾಗಿ ನಡೆಯುವ ಪ್ರಕ್ರಿಯೆ ಇದಾಗಿದ್ದು ಹೈಕಮಾಂಡ್ ಭೇಟಿಗೆ ಕೆಲವು ಶಾಸಕರು ಮುಂದಾಗಿ ಅವರವರ ಬೇಡಿಕೆ ಹೇಳಿಕೊಳ್ಳುವುದರಲ್ಲಿ ತಪ್ಪೇನಿದೆ ಅದಕ್ಕೆ ಏನೇನೋ ಕಥೆ ಕಟ್ಟೋದು ಸರಿಯಲ್ಲ ಎಂದು ಕುಟುಕಿದರು.

### ಇದ್ದಾಗ ಒಂದು ಮಾತು, ಇಲ್ಲದಾಗ ಒಂದು ಮಾತು

ವಿ.ಸೋಮಣ್ಣ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ನಾವು ನೇರವಾಗಿ ಹೇಳ್ತಾ ಇದ್ದೀವಿ. ಆದರೆ ಸರ್ಕಾರದ ಖಜಾನೆಯಲ್ಲಿ ಹಣವಿಲ್ಲ ಎಂದು ಸುಳ್ಳು ಹೇಳಿಕೆ ನೀಡಿರುವುದು ಸರಿಯಲ್ಲ. ಅಧಿಕಾರ ಇದ್ದಾಗ ಒಂದು ಮಾತು, ಇಲ್ಲದಾಗ ಒಂದು ಮಾತು ಆಡಿದರೆ ಜನ ಉಗಿಯುತ್ತಾರೆ. ಛೀಮಾರಿ ಹಾಕುತ್ತಾರೆ. ಅಧಿಕಾರ ಬೇಕೆಂದು ಸುಳ್ಳು ಹೇಳಿಕೆ ನೀಡುವುದು ಮುಂದಿನ ಪೀಳಿಗೆಗೆ ಮಾರಕ.

### ಮಾನ ಮರ್ಯಾದೆ ಇರುವವರು ಕುಟುಂಬ ರಾಜಕಾರಣ ಎಂಬ ಮಾತೇ ಆಡುವಂತಿಲ್ಲ

ಯಾವ ಪಕ್ಷದಲ್ಲಿ ಕುಟುಂಬ ರಾಜಕಾರಣ ಇಲ್ಲ. ದೇವೇಗೌಡರ ಕುಟುಂಬ ಎಲ್ಲರೂ ರಾಜಕಾರಣಿಗಳು, ಯಡಿಯೂರಪ್ಪ ಅವರ ಮನೆಯಲ್ಲೂ ಸಹ ಇದೆ. ಬಿಜೆಪಿ ಜೆಡಿಎಸ್ ಎಲ್ಲಾ ಪಕ್ಷದಲ್ಲಿ ಕುಟುಂಬ ರಾಜಕಾರಣ ಇರುವಾಗ, ಆತ್ಮಸಾಕ್ಷಿ, ಮಾನ ಮರ್ಯಾದೆ ಇರುವವರು ಕುಟುಂಬ ರಾಜಕಾರಣ ಎಂಬ ಮಾತೇ ಆಡುವಂತಿಲ್ಲ.

–ಎಸ್.ಆರ್.ಶ್ರೀನಿವಾಸ್
ಶಾಸಕರು, ಗುಬ್ಬಿ.



ಈ ಸಂದರ್ಭದಲ್ಲಿ ಕಾಂಗ್ರೆಸ್ ತಾಲ್ಲೂಕು ಅಧ್ಯಕ್ಷ ವೆಂಕಟೇಶ್, ಮುಖಂಡರಾದ ಬಿಲ್ಲೇಪಾಳ್ಯ ನರಸಿಂಹಮೂರ್ತಿ, ಮಹಮದ್ ಸಾದಿಕ್, ಸಿ.ಮೋಹನ್, ಅಣ್ಣಪ್ಪಸ್ವಾಮಿ, ಪಿ.ಟಿ.ಸತೀಶ್, ಉಂಡೆ ರಾಮಣ್ಣ, ಲೋಕೇಶ್ ಬಾಬು ಸೇರಿದಂತೆ ಸಾರಿಗೆ ನಿಗಮದ ಅಧಿಕಾರಿಗಳು ಇನ್ನಿತರರು ಇದ್ದರು.

# ಕೆ.ಎನ್. ರಾಜಣ್ಣನವರ 76ನೇ ಹುಟ್ಟುಹಬ್ಬಆಚರಣೆ

## ಅಭಿಮಾನಿ ಬಳಗದಿಂದ ಅನ್ನಸಂತರ್ಪಣೆ, ಸಿಹಿ ವಿತರಣೆ





ತುಮಕೂರು:ಮಾಜಿ ಸಚಿವ, ಮಧುಗಿರಿ ಶಾಸಕ, ಹಿರಿಯ ಸಹಕಾರಿಕೆ.ಎನ್. ರಾಜಣ್ಣನವರ 76ನೇ ಜನ್ಮದಿನವನ್ನು ಸೋಮವಾರಕೆ.ಎನ್.ಆರ್. ಅಭಿಮಾನಿ ಬಳಗದವರು ಸಂಭ್ರಮದಿಂದ ಆಚರಿಸಿದರು.

ನಗರದ ಗುಂಚಿವೃತ್ತದ ಟಿಎಪಿಸಿಎಂಎಸ್ ಕಟ್ಟಡ ಬಳಿ ನಡೆದ ಸಮಾರಂಭದಲ್ಲಿಕೆ.ಎನ್. ರಾಜಣ್ಣನವರ ಪುತ್ರಿ ಆರ್.ರಶ್ಮಿ ಗಿರೀಶ್‌ಅವರುಅನ್ನಸಂತರ್ಪಣೆಗೆ ಚಾಲನೆ ನೀಡಿದರು.ನಂತರ ರಶ್ಮಿಯವರು ಪೌರಕಾರ್ಮಿಕರೊಂದಿಗೆ ಬೃಹತ್‌ಕೇಕ್ ಕತ್ತರಿಸಿ ಸಿಹಿ ತಿನ್ನಿಸಿ ತಮ್ಮತಂದೆಯ ಹುಟ್ಟುಹಬ್ಬಆಚರಣೆಯನ್ನು ಸಂಭ್ರಮಿಸಿದರು. ಇದರ ಅಂಗವಾಗಿ ಪೌರಕಾರ್ಮಿಕರನ್ನು ಸನ್ಮಾನಿಸಿ ಅವರ ಸೇವೆಯನ್ನುಗೌರವಿಸಲಾಯಿತು.ಈ ಸಾಲಿನ ದ್ವಿತೀಯ ಪಿಯೂಸಿ ಪರೀಕ್ಷೆಯಲ್ಲಿಅತ್ಯಧಿಕ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಿ ಪ್ರೋತ್ಸಾಹಿಸಲಾಯಿತು.ಈ ಬಾರಿಯ ಬಾಬು ಜಗಜೀವನರಾಮ್ ಪ್ರಶಸ್ತಿ ಪುರಸ್ಕೃತರಾದ ನಗರಸಭೆ ಮಾಜಿ ಸದಸ್ಯ ನರಸಿಯಪ್ಪ ಅವರನ್ನು ಈ ವೇಳೆ ಗೌರವಿಸಿ ಅಭಿನಂದಿಸಲಾಯಿತು.

ಕಳೆದ 50 ವರ್ಷಗಳ ಕೆ.ಎನ್. ರಾಜಣ್ಣನವರ ಸಾರ್ವಜನಿಕ ಬದುಕಿನ ಪ್ರಮುಖ ಘಟನಾವಳಿಗಳ ಫೋಟೋ ಹಾಗೂ ವಿಡಿಯೋ ದೃಶ್ಯಾವಳಿಗಳನ್ನು ಎಲ್‌ಇಡಿಯದೊಡ್ಡ ಪರದೆ ಮೇಲೆ ಪ್ರದರ್ಶಿಸಲಾಗಿತ್ತು.

ಹಿರಿಯ ರಂಗ ನಿರ್ದೇಶಕ ಡಾ. ಲಕ್ಷ್ಮಣದಾಸ್, ಡಾ.ಎಸ್.ನಾಗಣ್ಣ, ಕೆ.ಎನ್.ಆರ್‌ಅಭಿಮಾನಿ ಬಳಗದ ಮುಖಂಡರಾದ ನಗರಸಭೆ ಮಾಜಿ ಅಧ್ಯಕ್ಷ ಟಿ.ಪಿ.ಮಂಜುನಾಥ್, ವಕೀಲ ಪಿ.ಆರ್.ನಾರಾಯಣಗೌಡ, ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಲಕ್ಷ್ಮೀನಾರಾಯಣ, ಟಿಎಪಿಸಿಎಂಎಸ್ ನಿರ್ದೇಶಕರಾದ ಕುಂಕುಮನಹಳ್ಳಿ ನವ ರತ್ನ ಕುಮಾರ್, ಜಿಯಾವುಲ್ಲಾ, ಕಾರ್ಯದರ್ಶಿ ರವಿಕುಮಾರ್, ನೀಲಕಂಠೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಟಿ.ಹೆಚ್. ಶಿವಾನಂದ್, ಮುಖಂಡರಾದ ನಿಸಾರ್‌ಅಹ್ಮದ್, ಕುಂದೂರು ಮುರಳಿ, ಮಂಜೇಶ್‌ಒಲಂಪಿಕ್, ರಮಣರೆಡ್ಡಿ, ಎಂ.ಹೆಚ್.ನಾಗರಾಜು, ಪಿ.ಎನ್. ರಾಮಯ್ಯ,ಎಂ. ಜೆ.ಶಿವಣ್ಣ, ನಟರಾಜ ಶೆಟ್ಟಿ, ನಂಜೇಗೌಡ, ರಂಗರಾಜು, ನರಸಿಯಪ್ಪ, ಕೈದಾಳ ರಮೇಶ್ ಸೇರಿದಂತೆ ವಿವಿಧ ಸಹಕಾರ ಸಂಸ್ಥೆ, ಸಂಘ ಸಂಸ್ಥೆಗಳು ಪ್ರಮುಖರು ಭಾಗವಹಿಸಿದ್ದರು.

**ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ**

# ರೈತ ಸಂಘದ ಬೃಹತ್ ಹೋರಾಟ



ಮಧುಗಿರಿ :–ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುತ್ತಿರುವುದನ್ನು ಹಾಗೂ ರೈತರ ಪಂಪ್ ಸೆಟ್ ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ನಿಲ್ಲಿಸಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಎ. ಗೋವಿಂದರಾಜು ಅಗ್ರಹಿಸಿದರು. ಪಟ್ಟಣದ ಟಾನ್ ಹಾಲ್ ನಿಂದ ತಾಲ್ಲೂಕು ಕಚೇರಿವರೆಗೆ ಪ್ರತಿಭಟನೆ ನಡೆಸಿ ಮಾತನಾಡಿದ ಅವರು ರೈತರಿಗೆ ಅಗತ್ಯವಾದ ವಿದ್ಯುತ್ ಅನ್ನು ಸರ್ಕಾರವೇ ಒದಗಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಮಾತನಾಡಿದ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೇಗೌಡನಹಳ್ಳಿ ಶಂಕರಪ್ಪ ತಾಲ್ಲೂಕಿನ ಹತ್ತಿ ಬೆಳಗಾರರಿಗೆ ನ್ಯಾಯ ಸಿಗಬೇಕು ಹಾಗೂ ಹತ್ತಿ ಕಾಳಿನ ತೂಕದಲ್ಲಿ, ಬೆಲೆಯಲ್ಲಿ ಮೋಸ ಮಾಡಿ ರೈತರಿಗೆ ಕಿರುಕುಳ ಕೊಡುವ ಏಜೆಂಟರ ವಿರುದ್ಧ ಕ್ರಮ ಕೈಗೊಳ್ಳಬೇಕು, ಎತ್ತಿನ ಹೊಳೆ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕುತಾಲ್ಲೂಕಿಗೆ 2ಟಿ ಎಂ ಸಿ ನೀರು ನೀಡಬೇಕು ಎಂದು ಆಗ್ರಹಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ರೈತ ಸಂಘದ ಅಧ್ಯಕ್ಷ ಲಕ್ಷ್ಮೀ ನಾರಾಯಣ ರೆಡ್ಡಿ ಮಾತನಾಡಿ ಜಿಲ್ಲೆಯಲ್ಲಿ ಹುಣಸೆ ಅಭಿವೃದ್ಧಿ ಮಂಡಳಿ ಸ್ಥಾಪನೆಯಾಗಬೇಕು ಎಂದು ಒತ್ತಾಯಿಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಶ್ರೀನಿವಾಸ್ ಏ. 21ರಂದು ಅಧಿಕಾರಿಗಳನ್ನು ಕರೆಸಿ ಸಭೆ ನಡೆಸುವದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ದೊಡ್ಡ ಮಾಳಯ್ಯ, ನಾದುರೂ ಕೆಂಚಪ್ಪ, ನಾಗರತ್ನಮ್ಮ ಚಿಕ್ಕ ಬೋರೇಗೌಡ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ರಾಜಶೇಖರ್, ಲಕ್ಷಣ ಗೌಡ, ನರಸಿಂಹಮೂರ್ತಿ ಇದ್ದರು

# ಸಿದ್ಧಾರ್ಥದಲ್ಲಿ ಸಂಭ್ರಮ –2026 : ಹಳೆ ವಿದ್ಯಾರ್ಥಿಗಳ ಜೊತೆ ಗೃಹ ಸಚಿವರ ಸಂವಾದ

ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ವತಿಯಿಂದ ಆಯೋಜಿಸಿರುವ ಮಾಧ್ಯಮ ಹಬ್ಬ 'ಸಂಭ್ರಮ' ಪ್ರಯುಕ್ತ ಹಳೆಯ ವಿದ್ಯಾರ್ಥಿಗಳ ಜತೆಗೆ ನಡೆಯುವ ಆಪ್ತ ಸಂವಾದದಲ್ಲಿ ನಾನು ಭಾಗವಹಿಸುತ್ತೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು. ತುಮಕೂರು ನಗರದ ಪ್ರವಾಸಿ ಮಂದಿರದಲ್ಲಿ ಈಚೆಗೆ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಹಳೆ ವಿದ್ಯಾರ್ಥಿಗಳು ಭೇಟಿಯಾಗಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು. ಸಂಘದ ನಾಮಫಲಕ ಉದ್ಘಾಟಿಸಿ, ವಿದ್ಯಾರ್ಥಿಗಳ ಜತೆಗೆ ಸಂವಾದ ನಡೆಸುವಂತೆ ಮನವಿ ಮಾಡಿದರು. ಆಹ್ವಾನ ಸ್ವೀಕರಿಸಿ ಹಾಗೂ ಸಂಭ್ರಮ –2026 ಪೋಸ್ಟರ್ ಬಿಡುಗಡೆ ಮಾಡಿ ಪರಮೇಶ್ವರ್ ಮಾತನಾಡಿದರು

ಶ್ರೀ ಸಿದ್ಧಾರ್ಥ ಸಂಸ್ಥೆಯಲ್ಲಿ ಓದಿ, ಮಾಧ್ಯಮ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವ ಹಳೆ ವಿದ್ಯಾರ್ಥಿಗಳ ಸಮಾಗಮಕ್ಕೆ ಸಂಭ್ರಮ ಒಂದು ಉತ್ತಮ ವೇದಿಕೆಯಾಗಿದೆ. ಅವರೊಟ್ಟಿಗೆ ಸಂವಾದ ನಡೆಸವುದು, ಮಾಧ್ಯಮ ಕ್ಷೇತ್ರದ ಪ್ರಸ್ತುತ ಸಾವಲು, ಸಾಧ್ಯತೆ ಕುರಿತು ಚರ್ಚೆ ಮಾಡಿ, ಹೊಸ ಕಾಲದ ಸಮಸ್ಯೆಗೆ, ಹೊಸ ಪರಿಹಾರ ಕಂಡುಕೊಳ್ಳಲು ಇದು ಉತ್ತಮ ಅವಕಾಶವಾಗಿದೆ ಎಂದರು.

ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ಓದಿ ರಾಜ್ಯದ ಎಲ್ಲಾ ಮಧ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಹಳೆ ವಿದ್ಯಾರ್ಥಿಗಳು ಒಂದೆಡೆ ಸೇರಿ ಮಾಧ್ಯಮ ಕ್ಷೇತ್ರದ ಹೊಸ ಸಾಧ್ಯತೆ ಮತ್ತು ವೃತ್ತಿ ಬದುಕಿನ ಸಾವಲುಗಳ ಕುರಿತು ಚರ್ಚಿಸಲು ಹಳೆ ವಿದ್ಯಾರ್ಥಿ ಸಂಘ ಶ್ರಮಿಸಲಿದೆ. ತುಮಕೂರಿನ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ಶಿಕ್ಷಣ ಪಡೆದವರು ಪ್ರಸ್ತುತ ಎಲ್ಲ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ವರ್ಷ ನಡೆಯುವ ಸಂಭ್ರಮದಲ್ಲಿ ಅವರೆಲ್ಲರೂ ಸಂಭ್ರಮದಲ್ಲಿ ಭಾಗವಹಿಸಲಿದ್ದಾರೆ.

ಹಾಗೂ ಪ್ರಸ್ತುತ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ರಚನಾತ್ಮಕ ಚುಟುವಟಿಕೆ ಮಾಡುವುದು. ವಿಶೇಷ ಕಾರ್ಯಾಗಾರ, ನುರಿತ ತಜ್ಞರೊಂದಿಗೆ ಸಂವಾದ, ಚರ್ಚೆ ಸೇರಿದಂತೆ ಹಲವು ವಿನೂತನ ಕಾರ್ಯಕ್ರಮ ಆಯೋಜನೆ ಮಾಡುವ ಉದ್ದೇಶ ಹೊಂದಿದೆ ಎಂದು ಸಂಘದ ಅಧ್ಯಕ್ಷ ಎ. ಎನ್. ರಘು ತಿಳಿಸಿದರು.

ಈ ಬಾರಿಯ ಸಂಭ್ರಮ ಹಲವು ವಿಶೇಷಗಳಿಂದ ಕೂಡಿದೆ.



ಕಾರ್ಯಕ್ರಮದ ಥೀಮ್ 'ಪರಿಸರ ಪತ್ರಿಕೋದ್ಯಮ' ಎಲ್ಲರ ಗಮನ ಸೆಳೆದಿದೆ. ಸಂಭ್ರಮ ಕಾರ್ಯಕ್ರಮವನ್ನು ಪೌರ ಕಾರ್ಮಿಕರಿಗೆ ಸಮರ್ಪಣೆ ಮಾಡುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ಅವರಿಗೆ ಕಾರ್ಯಕ್ರಮದಲ್ಲಿ ಸನ್ಮಾನ ಕಾರ್ಯಕ್ರಮವು ಇರಲಿದೆ. ರಾಜ್ಯದ ಎಲ್ಲ ಪದವಿ ವಿದ್ಯಾರ್ಥಿಗಳಿಗೆ 8 ಸ್ಪರ್ಧೆ ಆಯೋಜನೆ ಮಾಡಲಾಗಿದೆ ಎಂದು ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ನಿರ್ದೇಶಕ ಬಿ. ಟಿ. ಮುದ್ದೇಶ್ ಮಾಹಿತಿ ನೀಡಿದರು ಇದೇ ಸಂದರ್ಭದಲಿ ಈಶ್ವರ್, ಹರೀಶ್ ಆಚಾರ್ಯ, ಮಹೇಶ್, ಮಹಂತೇಶ್, ಭಾನುಪ್ರಕಾಶ್,ಶಂಕರ್ ಶಿರಾ, ರವಿಕುಮಾರ್ ಚಿಂಪುಗಾನಹಳ್ಳಿ, ವಿನಯ್, ನವೀನ್, ಗೌತಮ್ , ಮೈಲಾರಿ ಲಿಂಗಪ್ಪ, ಬಿ ಸಿ ಹರೀಶ್ ಕುಮಾರ್ ಸೇರಿದಂತೆ ಹಲವರು ಇದ್ದರು

## ಪರಿಸರ ಪತ್ರಿಕೋದ್ಯಮ ಪೌರಕಾರ್ಮಿಕರಿಗೆ ಸನ್ಮಾನ

ಸರ್ಕಾರ ಪರಿಸರದ ಸಂರಕ್ಷಣೆ ಮತ್ತು ಉಳಿವಿಗಾಗಿ ಅನೇಕ ಯೋಜನೆ ಮತ್ತು ಸಾರ್ವಜನಿಕರಿಗಾಗಿ ಅರಿವು ಕಾರ್ಯಕ್ರಮಗಳನ್ನ ರೂಪಿಸುತ್ತಿದ್ದು ಬದಲಾಗುತ್ತಿರುವ ಆಧುನಿಕ ಜೀವನ ಶೈಲಿಯ ಕುತಂತ್ರಕ್ಕೆ ಪರಿಸರ ಬಲಿಯಾಗುತ್ತಿರುವ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಗಾಗಿ ಪತ್ರಿಕ ರಂಗದಲ್ಲಿ ಮಾಧ್ಯಮ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಕುರಿತಾಗಿ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರವು 2026ನೇ ಸಾಲಿನ ಎರಡು ದಿನಗಳ ಮಾಧ್ಯಮ ಹಬ್ಬದಲ್ಲಿ ಪರಿಸರ ಸಂಬಂಧಿತ ಛಾಯಾಚಿತ್ರ ವಿವಿಧ ಇಲಾಖೆಗಳ ಪ್ರಾತ್ಯಕ್ಷಿಕೆ ಸೇರಿದಂತೆ ಪರಿಸರ ಸಂರಕ್ಷಣೆಗಾಗಿ ಸಾವಿರಾರು ಗಿಡಗಳನ್ನು ನೆಟ್ಟ ಸಾಲುಮರದ ತಿಮ್ಮಕ್ಕನವರ ನೆನಪಿನಾರ್ಥವಾಗಿ ಪ್ರತಿನಿತ್ಯ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವಲು ಶ್ರಮಿಸುತ್ತಿರುವ ತುಮಕೂರು ನಗರದ ಸುಮಾರು 35 ಜನ ಪೌರಕಾರ್ಮಿಕರಿಗೆ ಸನ್ಮಾನಿಸುವುದರ ಮೂಲಕ ಈ ಬಾರಿಯ ರಾಜ್ಯಮಟ್ಟದ ಸಂಭ್ರಮ ಕಾರ್ಯಕ್ರಮವನ್ನು ಸಮರ್ಪಣೆ ಮಾಡಲಾಗುತ್ತಿದೆ.

## ರಾಜ್ಯದ ಸುಮಾರು 400 ಕ್ಕೂ ಹೆಚ್ಚು ಡಿಗ್ರಿ ಮತ್ತು ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಹ್ವಾನ

ಸಿದ್ಧಾರ್ಥ ಮಾಧ್ಯಮ ದಿನ ಕೇಂದ್ರದಲ್ಲಿ ಎರಡು ದಿನಗಳ ರಾಜ್ಯಮಟ್ಟದ ಮಾಧ್ಯಮ ಕ್ಷೇತ್ರದ ಸಂಭ್ರಮ ಕಾರ್ಯಕ್ರಮವು ವಿಜೃಂಭಣೆ ಹಾಗೂ ವಿಭಿನ್ನ ಮತ್ತು ಅದ್ದೂರಿಯಾಗಿ ನಡೆಯುತ್ತಿದ್ದು ಈ ಕಾರ್ಯಕ್ರಮವನ್ನು ಪ್ರತಿನಿಧಿಸಲು ಅಧ್ಯಯನ ಕೇಂದ್ರವು ರಾಜ್ಯದ ಮೂಲೆ ಮೂಲೆಯ ಸುಮಾರು 400ಕ್ಕೂ ಹೆಚ್ಚು ಡಿಗ್ರಿ ಕಾಲೇಜು ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜು ಸೇರಿದಂತೆ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಈಗಾಗಲೇ ಆಹ್ವಾನ ನೀಡಲಾಗಿದ್ದು ಈ ಮಾಧ್ಯಮಬ್ಬದಲ್ಲಿ ಭಾಗವಹಿಸುವ ಆಸಕ್ತರು ಗೂಗಲ್ ಮೂಲಕ ನೊಂದಣಿ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ ಕಾರ್ಯಕ್ರಮಕ್ಕೆ ಆಗಮಿಸುವ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಸೇರಿದಂತೆ ಉಳಿದುಕೊಳ್ಳುವ ವಸತಿಯಿಂದ ಕಾಲೇಜು ಬಳಿಗೆ ವಾಹನ ಸೌಕರ್ಯವನ್ನು ಒದಗಿಸಲಾಗುತ್ತಿದೆ.

## ವಿದ್ಯಾರ್ಥಿಗಳಿಗೆ ಸವಾಲ್ ಎಸೆಯುವ 8 ಇವೆಂಟ್ ಗಳ ಆಯೋಜನೆ...

ಮಾಧ್ಯಮ ಕ್ಷೇತ್ರಕ್ಕೆ ದಾಪುಗಾಲು ಇಡುವ ಮಾಧ್ಯಮ ವಿದ್ಯಾರ್ಥಿಗಳು ಆಚರಿಸುತ್ತಿರುವ ಸಂಭ್ರಮ ಕಾರ್ಯಕ್ರಮ ವಿಶೇಷತೆ ಮತ್ತು ವಿಭಿನ್ನವಾಗಿ ಕೂಡಿದ್ದು ರಾಜ್ಯದ ಮೂಲೆ ಮೂಲೆಯಿಂದ ಆಹ್ವಾನಿಸಿರುವ ಪದವಿ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ಮಾಧ್ಯಮ ಕ್ಷೇತ್ರದಲ್ಲಿ ತೊಡಗಿ ತೊಡಗಿಸಿಕೊಳ್ಳಲು ಸುಮಾರು 8 ವಿವಿಧ ರೀತಿಯ ಇವೆಂಟ್ ಗಳನ್ನ ಆಯೋಜನೆ ಮಾಡಲಾಗಿದ್ದು ತುಮಕೂರಿನ ಮೊಟ್ಟ ಮೊದಲ ಸಮುದಾಯ ಬಾನುಲಿ ಕೇಂದ್ರವಾದ ರೇಡಿಯೋ ಸಿದ್ಧಾರ್ಥ 90.8. ಇಲ್ಲಿ ವಿದ್ಯಾರ್ಥಿಗಳು ರೇಡಿಯೋ ಜಾಕಿಯಾಗಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸುಮಾರು ನಾಲ್ಕು ನಿಮಿಷಗಳ ಕಾಲ ಮಾತನಾಡಿ ಪ್ರಶಸ್ತಿ ಗೆಲ್ಲುವ ಅವಕಾಶವನ್ನು ಕಲ್ಪಿಸಲಾಗಿದೆ.

ಇನ್ನು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಬಹು ಮುಖ್ಯವಾಗಿರುವ ಫೋಟೋಗ್ರಫಿ ಛಾಯಾಚಿತ್ರ ಸೆರೆ ಹಿಡಿಯುವುದು, ಕಿವಿ ಕ್ಷೇತ್ರಗಳಲ್ಲಿ ಪ್ರಚಲಿತವಾಗಿರುವ ಪಿಟಿಸಿ ನೀಡುವುದು ಟಿವಿ ಪರದೆಯ ಮೇಲೆ ಸುದ್ದಿ ವಾಚನ ಮಾಡುವುದು ರೇಡಿಯೋ ಮತ್ತು ಟಿವಿ ಗಾಗಿ ಸುದ್ದಿ ಬರೆಯುವುದು ಮತ್ತು ಸ್ಥಳದಲ್ಲಿ ಭಿನ್ನವಿಭಿನ್ನವಾಗಿ ನಟಿಸುವ ಮೂಲಕ ಮ್ಯಾಡ್ ಹೆಡ್ ಮಾಡುವುದು ಸೇರಿದಂತೆ ಹಲವು ಇವೆಂಟ್ಗಳನ್ನು ಆಯೋಜಿಸಲಾಗಿದ್ದು ಇದರಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಅತ್ಯುತ್ತಮವಾದ ಬಹುಮಾನವನ್ನು ತಮ್ಮದಾಗಿಸಿಕೊಳ್ಳಬಹುದಾಗಿದೆ.

## ಸುದ್ದಿ ಲೋಕದ ನುರಿತ ತಜ್ಞ ಅತಿಥಿಗಳಿಗೆ ಆಹ್ವಾನ

ಮಾಧ್ಯಮ ಅಧ್ಯನ ಕೇಂದ್ರದಲ್ಲಿ ನಡೆಯುವ ಎರಡು ದಿನಗಳ ರಾಜ್ಯಮಟ್ಟದ ಮಾಧ್ಯಮದ ಹಬ್ಬಕ್ಕೆ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಪ್ರಭಾಕರ್ ಮತ್ತು ಸುದ್ದಿ ಕ್ಷೇತ್ರದಲ್ಲಿ ಕೆಲಸ ಮಾಡುವ ವಿಧಾನಪರಿಷತ್ ಸದಸ್ಯರಾದ ಶಿವಕುಮಾರ್ ಈ ದಿನ.ಛಿಂಟ ನ ವಾಸು ಸೇರಿದಂತೆ ಇತರೆ ಸುದ್ದಿ ಸಂಸ್ಥೆಯಲ್ಲಿ ಕಾರ್ಯನಿರ್ವಹಣೆ ಮಾಡುವ ಗಣ್ಯರು ಸಂಭ್ರಮ ಕಾರ್ಯಕ್ರಮದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಲಿದ್ದಾರೆ.




## ವಿವಿಧ ಸರ್ಕಾರಿ ಇಲಾಖೆಗಳಿಂದ ಪ್ರಾತ್ಯಕ್ಷಿಕೆ ಪ್ರದರ್ಶನ

ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿರುವ ಎರಡು ದಿನಗಳ ರಾಜ್ಯಮಟ್ಟದ ಸಂಭ್ರಮ ಕಾರ್ಯಕ್ರಮದಲ್ಲಿ ಪರಿಸರ ಪತ್ರಿಕೋದ್ಯಮಕ್ಕೆ ಪೂರಕವಾಗಿ ಕೃಷಿ ಇಲಾಖೆಯ ಅರಣ್ಯ ಇಲಾಖೆಯ ತೋಟಗಾರಿಕಾ ಇಲಾಖೆ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಮಹಾನಗರ ಪಾಲಿಕೆ ಜಿಲ್ಲಾ ಪಂಚಾಯತ್ ಸೇರಿದಂತೆ ಜಿಲ್ಲಾಡಳಿತದ ವಿವಿಧ ಇಲಾಖೆಗಳ ಸಹಭಾಗಿತ್ವದಲ್ಲಿ ಸಂಭ್ರಮಕ್ಕೆ ಬರುವ ವಿದ್ಯಾರ್ಥಿ ಮತ್ತು ಸಾರ್ವಜನಿಕರನ್ನು ಸ್ವಾಗತಿಸಲು ಪರಿಸರ ಸಂರಕ್ಷಣೆ ಕುರಿತಂತೆ ವಿವಿಧ ರೀತಿಯ ಸಾಕ್ಷ್ಯಾಚಿತ್ರ ಮತ್ತು ವಸ್ತು ಪ್ರದರ್ಶನ ಎಲ್ಲರನ್ನು ಸ್ವಾಗತಿಸಲಿದೆ.

## ತಿಪಟೂರು ಟೂಡಾ ಶಶಿಧರ್ ಅವರಿಂದ 35 ಪೌರ ಕಾರ್ಮಿಕರಿಗೆ ಸನ್ಮಾನ

ಪರಿಸರ ಸಂರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸುವ ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುಮಾರು 35 ವಾರ್ಡ್ ನ ಸುಮಾರು 35 ಪೌರ ಕಾರ್ಮಿಕರಿಗೆ ಸಂಭ್ರಮದಲ್ಲಿ ಸನ್ಮಾನಿಸಲಾಗುತ್ತಿದ್ದು ಇದರ ಸಂಪೂರ್ಣ ಪ್ರಾಯೋಜಕತ್ವವನ್ನು ತುಮಕೂರು ಜಿಲ್ಲೆ ತಿಪಟೂರಿನ ಜನಸ್ಪಂದನ ಸಂಸ್ಥೆಯ ಕೂಡ ಶಶಿಧರ್ ಅವರು ವಹಿಸಿಕೊಂಡು ಯಶಸ್ವಿಯಾಗಿ ನಡೆಸಿಕೊಡಲಿದ್ದಾರೆ.

ಹೀಗೆ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ಎರಡು ದಿನದ ರಾಜ್ಯಮಟ್ಟದ ಸಂಭ್ರಮ ಫೆಸ್ಟ್ ಹತ್ತು ಹಲವು ವಿಶೇಷತೆಗಳಿಂದ ಎಲ್ಲರ ಗಮನ ಸೆಳೆಯುತ್ತಿದೆ ಮಾಧ್ಯಮ ಅಧ್ಯಯನ ಕೇಂದ್ರದ ಹಳೆ ವಿದ್ಯಾರ್ಥಿಗಳು ಸುದ್ದಿ ಲೋಕದ ಅಕ್ಷರ ಮಾಂತ್ರಿಕರು ಒಂದೆಡೆ ಸೇರಿ ಚರ್ಚಿಸಿ ವಿಷಯ ವಿನಿಮಯ ಮಾಡುವ 2026 ಸಾಲಿನ ಈ ಸಂಭ್ರಮ ವಿಜೃಂಭಣೆಯಿಂದ ಯಶಸ್ವಿ ಕಾಣಲಿ ಎಂಬುದು ಎಲ್ಲರ ಆಶಯವಾಗಿದೆ.

# ಜಿಲ್ಲೆಯ ಮೂವರು ಹಿರಿಯ ಪತ್ರಕರ್ತರಿಗೆ ಕೆಯುಡಬ್ಲ್ಯೂಜೆಯ ವಾರ್ಷಿಕ ಪ್ರಶಸ್ತಿಗಳು...

ಹಿರಿಯ ಪತ್ರಕರ್ತ, ಆದಿತ್ಯವಾಣಿ ಸಂಪಾದಕ ತಿಪಟೂರು ಕೃಷ್ಣ ಅವರಿಗೆ ಕೆಯುಡಬ್ಲೂಜೆ ರಾಜ್ಯ ಮಟ್ಟದ ಟಿ. ಕೆ. ಮಲಗೊಂಡ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಏಪ್ರಿಲ್ 11 ಮತ್ತು 12 ರಂದು ಬೀದರ್‌ನಲ್ಲಿ ನಡೆದ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ರಾಜ್ಯ ಸಮ್ಮೇಳನದಲ್ಲಿ ಸಚಿವರಾದ ಭೀಮಣ್ಣ ಖಂಡ್ರೆ, ವಿಧಾನ ಸಭಾ ಅಧ್ಯಕ್ಷರಾದ ಯು ಟಿ ಖಾದರ್, ವಿರೋಧ ಪಕ್ಷದ ನಾಯಕ ಆರ್ ಅಶೋಕ್, ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಜಿ ಸಿ ಲೋಕೇಶ ಟಿ ಕೆ ಮಲಗೊಂಡ ದತ್ತಿ ಪ್ರಶಸ್ತಿ ನೀಡಿ ಪುರಸ್ಕರಿಸಿದರು. ಸನ್ಮಾನದ ಜೊತೆಗೆ ದತ್ತಿ ಪ್ರಶಸ್ತಿ ಫಲಕ ಮತ್ತು ನಾಲ್ಕು ಸಾವಿರ ಚೆಕ್ ನೀಡಲಾಯಿತು.

ಸತತ 31 ವರ್ಷಗಳ ದೀರ್ಘ ಸೇವೆಯ ನಂತರ ಈ ಪ್ರತಿಷ್ಠಿತ ಪ್ರಶಸ್ತಿ ಬಂದಿದ್ದು, ಸಂತಸವಾಗಿದೆ ಎಂದ ಪ್ರಶಸ್ತಿ ಪುರಸ್ಕೃತ ತಿಪಟೂರು ಕೃಷ್ಣ ಆಯ್ಕೆ ಮಾಡಿದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಜಿ ಸಿ ಲೋಕೇಶ್ ಮತ್ತು ಆಯ್ಕೆ ಸಮಿತಿಗೆ ಕೃತಜ್ಞತೆ ಸಲ್ಲಿಸಿದರು.

ಸಹಕಾರ ನೀಡಿದ ಜಿಲ್ಲಾಧ್ಯಕ್ಷ ಯೋಗೇಶ್ ಮತ್ತು ಪದಾಧಿಕಾರಿಗಳಿಗೆ, ರಾಜ್ಯ ಸಮಿತಿ, ಜಿಲ್ಲಾ ಸಮಿತಿ, ತಿಪಟೂರು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸ್ವಾಭಿಮಾನಿ ಪತ್ರಕರ್ತರ ತಂಡದ ಸದಸ್ಯರು, ಜಿಲ್ಲಾ ಎಲ್ಲಾ ಕಾರ್ಯನಿರತ ಪತ್ರಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ...



ಕುಣಿಗಲ್ ನ ಹಿರಿಯ ಪತ್ರಕರ್ತ ರಾಮಚಂದ್ರಯ್ಯನವರಿಗೆ ಕೆಯುಡಬ್ಲ್ಯೂಜೆ ರಾಜ್ಯ ಮಟ್ಟದ ಬಿ ಎ ನಂದಿಕೋಲು ಮಠ ದತ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಕರ್ನಾಟಕ ರಾಜ್ಯ ಪತ್ರಕರ್ತರ 40 ನೇ ಸಮ್ಮೇಳನದಲ್ಲಿ ಬಿ ಎ ನಂದಿಕೋಲು ಮಠ ದತ್ತಿ ಪ್ರಶಸ್ತಿಯನ್ನು ಸಚಿವರಾದ ಈಶ್ವರ್ ಖಂಡ್ರೆ, ವಿಧಾನಸಭಾಧ್ಯಕ್ಷರಾದ ಯು ಟಿ ಖಾದರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್ ಅಶೋಕ್ , ರಾಜ್ಯ ಅಧ್ಯಕ್ಷರಾದ ಶಿವಾನಂದ ತಗಡೂರು ರವರು ಸನ್ಮಾನಿಸಿ ಗೌರವಿಸಿದರು.



ಹಿರಿಯ ಪತ್ರಕರ್ತ ತುಮಕೂರಿನ ದೂರದರ್ಶನ ಚಂದನ ಟಿವಿಯ ವರದಿಗಾರಪಿ.ಡಿ.ಈರಣ್ಣ ಅವರಿಗೆ ಕೆಯುಡಬ್ಲ್ಯೂಜೆ ರಾಜ್ಯ ಮಟ್ಟದ ಅಭಿವೃದ್ಧಿ, ಸಾಮಾಜಿಕ, ಮಾನವೀಯ ವರದಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವೂ ಬೀದರ್‌ನಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ರಾಜ್ಯ ಸಮ್ಮೇಳನದಲ್ಲಿ ಸಚಿವರಾದ ಭೀಮಣ್ಣ ಖಂಡ್ರೆ, ವಿಧಾನಸಭಾಧ್ಯಕ್ಷರಾದ ಯು ಟಿ ಖಾದರ್, ವಿರೋಧ ಪಕ್ಷದ ನಾಯಕ ಆರ್ ಅಶೋಕ್, ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರಶಸ್ತಿ ನೀಡಿ ಗೌರವಿಸಿದರು.






# ಪಾವಗಡ ಚಿನ್ನದ ಅಂಗಡಿಗಳ ಮಾರುಕಟ್ಟೆಯ ಕರಾಳ ಮುಖ: ವಾಣಿಜ್ಯ ಇಲಾಖೆಗೆ ಲಕ್ಷಾಂತರ ರೂಪಾಯಿಗಳ 'ಹುಂಡೆನಾಮ' !

ವರದಿ: ಗೋವರ್ಧನ್ ಪಾವಗಡ.

ಪಾವಗಡ: ಪಟ್ಟಣದ ಪ್ರಮುಖ ರಸ್ತೆಗಳಲ್ಲಿರುವ ಕೆಲವೊಂದು ಜ್ಯುವೆಲ್ಲರಿ ಶಾಪ್‌ಗಳಲ್ಲಿ ಪ್ರತಿದಿನ ಲಕ್ಷಾಂತರ ರೂಪಾಯಿ ವ್ಯವಹಾರ ನಡೆಯುತ್ತಿದೆ. ಆದರೆ, ಗ್ರಾಹಕರಿಗೆ ನೀಡುವ ಬಿಲ್‌ಗಳಲ್ಲಿ ಜಿಎಸ್‌ಟಿ (ಉಖಖ) ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗುತ್ತಿದೆ. ಗ್ರಾಹಕರು ಅಧಿಕೃತ ಬಿಲ್ ಕೇಳಿದರೆ 'ಕಚ್ಚಾ ಬಿಲ್' ಅಥವಾ ಸಾಮಾನ್ಯ ಬಿಳಿ ಚೀಟಿಗಳ ಮೇಲೆ ಲೆಕ್ಕ ಬರೆದು ಕೊಡಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ ಸಲ್ಲಬೇಕಾದ ಶೇ. 3ರಷ್ಟು ಜಿಎಸ್‌ಟಿ ತೆರಿಗೆ ಹಣವು ನೇರವಾಗಿ ಮಳಿಗೆದಾರರ ಜೇಬು ಸೇರುತ್ತಿದೆ.ಇತ್ತೀಚಿನ ದಿನಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಮಾರುಕಟ್ಟೆಯಲ್ಲಿ ಬಿಲ್ ಇಲ್ಲದ ವ್ಯವಹಾರ, ತೆರಿಗೆ ವಂಚನೆ ಮತ್ತು ಕಳಪೆ ಗುಣಮಟ್ಟದ ಆಭರಣಗಳ ಮಾರಾಟದ ಬಗ್ಗೆ ಕೇಳಿಬರುತ್ತಿರುವ ಸುದ್ದಿಗಳು ಗ್ರಾಹಕರಲ್ಲಿ ಆತಂಕ ಮೂಡಿಸಿವೆ.ಈ ವ್ಯವಸ್ಥಿತ ತೆರಿಗೆ ಸೋರಿಕೆಯ ಹಿಂದೆ ವಾಣಿಜ್ಯ ಇಲಾಖೆಯ ಅಧಿಕಾರಿಗಳು ಮತ್ತು ಚಿನ್ನದ ವ್ಯಾಪಾರಿಗಳ ನಡುವಿನ 'ಒಳಒಪ್ಪಂದ' ಇರಬಹುದು ಎಂಬ ಮಾತುಗಳು ಈಗ ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬರುತ್ತಿವೆ.

ಕಳಪೆ ಗುಣಮಟ್ಟ ಮತ್ತು ಹಾಲಮಾರ್ಕಿಂಗ್ ವಂಚನೆ :

ಕೆಲವು ಅಂಗಡಿ ವರ್ತಕರು 22 ಕ್ಯಾರೆಟ್ ಚಿನ್ನ ಎಂದು ಹೇಳಿ 18 ಅಥವಾ 20 ಕ್ಯಾರೆಟ್ ಚಿನ್ನವನ್ನು ನೀಡುತ್ತಾರೆ ಬೆಳ್ಳಿಯ ಆಭರಣಗಳಲ್ಲಂತೂ ಕ್ಯಾಡ್ಮಿಯಂ ಅಥವಾ ಇತರ ಅಗ್ಗದ ಲೋಹಗಳನ್ನು ಮಿಶ್ರಣ ಮಾಡಿ ಗುಣಮಟ್ಟವನ್ನು ಕುಗ್ಗಿಸಲಾಗಿದ್ದ ಒಡವೆ ಆಭರಣಗಳನ್ನು ಮಾರುತ್ತಿದ್ದಾರೆ ಎಂದು ಅದೆಷ್ಟೋ ಜನ ಮೋಸಹೋಗಿ ಮರುಗಿಹೋಗಿದ್ದಾರೆ ಅನೇಕ ಚಿನ್ನದ ಅಂಗಡಿಗಳಲ್ಲಿ "ಬಿಲ್ ಇಲ್ಲದೆ ನೀಡಿದರೆ ಬೆಲೆ ಕಡಿಮೆ ಬೀಳುತ್ತದೆ" ಎಂಬ ಆಮಿಷವನ್ನು ಗ್ರಾಹಕರಿಗೆ ಒಡ್ಡಲಾಗುತ್ತದೆ. ಗ್ರಾಹಕರು ಕೂಡ ಶೇ. 3ರಷ್ಟು ಜಿಎಸ್‌ಟಿ (ಉಖಖ) ಉಳಿಸುವ ಆಸೆಯಿಂದ ಬಿಲ್ ಇಲ್ಲದೆ ಆಭರಣಗಳನ್ನು ಖರೀದಿಸುತ್ತಾರೆ. ಆದರೆ ಇದು ದೊಡ್ಡ ಅಪಾಯಕ್ಕೆ ನಾಂದಿ.ಕೆಲವು ಚಿನ್ನ ಮತ್ತು ಬೆಳ್ಳಿ ಮಳಿಗೆಗಳು ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಯನ್ನು ಪಾವತಿಸದೆ ವಾಣಿಜ್ಯ ಇಲಾಖೆಗೆ ಲಕ್ಷಾಂತರ ರೂಪಾಯಿಗಳು ವಂಚಿಸುತ್ತಿರುವ ಗಂಭೀರ ಆರೋಪ ಕೇಳಿಬಂದಿದೆ. ಈ ವ್ಯವಸ್ಥಿತ ತೆರಿಗೆ ಸೋರಿಕೆಯ ಹಿಂದೆ ವಾಣಿಜ್ಯ ಇಲಾಖೆಯ ಅಧಿಕಾರಿಗಳು ಮತ್ತು ಚಿನ್ನದ ವ್ಯಾಪಾರಿಗಳ ನಡುವಿನ 'ಒಳಒಪ್ಪಂದ' ಇರಬಹುದು ಎಂಬ ಮಾತುಗಳು ಈಗ ಸಾರ್ವಜನಿಕ ವಲಯದಲ್ಲಿ ಬಲವಾಗಿ ಕೇಳಿಬರುತ್ತಿವೆ.

ವರದಿಯ ಮುಖ್ಯಾಂಶಗಳು:

ಅಕ್ರಮ ಒಳಒಪ್ಪಂದ: ಅಧಿಕಾರಿಗಳು ಮತ್ತು ವರ್ತಕರ ನಡುವೆ ಗುಪ್ತ ವ್ಯವಹಾರದ ಶಂಕೆ.

ಕಚ್ಚಾ ಬಿಲ್ ಹಾವಳಿ: ಜಿಎಸ್‌ಟಿ ವಂಚಿಸಿ ಬಿಳಿ ಚೀಟಿಯಲ್ಲಿ ವ್ಯವಹಾರ.

ದಾಸ್ತಾನು ವ್ಯತ್ಯಾಸ: ಅಂಗಡಿಯಲ್ಲಿರುವ ಚಿನ್ನದ ಸಂಗ್ರಹಕ್ಕೂ ದಾಖಲೆಗಳಿಗೂ ಸಂಬಂಧವೇ ಇಲ್ಲ.

ಸರ್ಕಾರಕ್ಕೆ ನಷ್ಟ: ಲಕ್ಷಾಂತರ ರೂಪಾಯಿಗಳು ತೆರಿಗೆ ಹಣ ಲೂಟಿ.

ಬಿಲ್ ಇಲ್ಲದ ವ್ಯವಹಾರ: ತೆರಿಗೆ ವಂಚನೆಯ ಜಾಲ

ಹಾಲ್‌ಮಾರ್ಕಿಂಗ್ ವಂಚನೆ: ಈಗ ಬಿಐಎಸ್ (ಃಋಖ) ಹಾಲ್‌ಮಾರ್ಕಿಂಗ್ ಕಡ್ಡಾಯವಾಗಿದ್ದರೂ, ಕೆಲವು ಸಣ್ಣ ಪುಟ್ಟ ಅಂಗಡಿಗಳಲ್ಲಿ ನಕಲಿ ಮುದ್ರೆಗಳನ್ನು ಬಳಸಿ ಗ್ರಾಹಕರನ್ನು ನಂಬಿಸಲಾಗುತ್ತದೆ.

ತೂಕದಲ್ಲಿ ವ್ಯತ್ಯಾಸ: ಆಭರಣದ ತೂಕದಲ್ಲಿ ದೂಳು ಅಥವಾ ಮೇಣದ ಅಂಶವನ್ನು ಸೇರಿಸಿ ಗ್ರಾಹಕರಿಂದ ಹೆಚ್ಚಿನ ಹಣ ವಸೂಲಿ ಮಾಡುವ ತಂತ್ರಗಳು ನಡೆಯುತ್ತಿವೆ.

ಸರ್ಕಾರಕ್ಕೆ ನಷ್ಟ: ಬಿಲ್ ಇಲ್ಲದ ಪ್ರತಿಯೊಂದು ವ್ಯವಹಾರವೂ ಸರ್ಕಾರದ ಖಜಾನೆಗೆ ಸೇರಬೇಕಾದ ತೆರಿಗೆಯನ್ನು ಕದಿಯುವ ಕೆಲಸವಾಗಿದೆ. ಇದರಿಂದ ದೇಶದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ.

ಗ್ರಾಹಕರಿಗೆ ಭದ್ರತೆ ಇಲ್ಲ: ಬಿಲ್ ಇಲ್ಲದಿದ್ದಾಗ ಆ ಆಭರಣವು ಕಳವು ಮಾಡಿದ್ದೋ ಅಥವಾ ಅಕ್ರಮವಾಗಿ ತಂದಿದ್ದೋ ಎಂಬುದು ತಿಳಿಯುವುದಿಲ್ಲ. ಭವಿಷ್ಯದಲ್ಲಿ ಆಭರಣವನ್ನು ಮರುಮಾರಾಟ ಮಾಡುವಾಗ ಅಥವಾ ಅಡವಿಡುವಾಗ ಕಾನೂನುಬದ್ಧ ದಾಖಲೆ ಇಲ್ಲದೆ ಗ್ರಾಹಕರು ಸಂಕಷ್ಟಕ್ಕೆ ಸಿಲುಕುತ್ತಾರೆ.

ಸೇಲ್ಸ್ ಟ್ಯಾಕ್ಸ್ ವಾಣಿಜ್ಯ ಇಲಾಖೆ ಬಂದರೆ ಕೆಲವು ಅಂಗಡಿಗಳ ಬಂದ್ ವಾಣಿಜ್ಯ ತೆರಿಗೆ ಇಲಾಖೆ (ಖಚಿಟಛಿ ಖಿಚಿಥ/ಉಖಖಿ ಆಜಠಿಚಿಡಿಣಟಜಟಿಣ) ಅಥವಾ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಲು ಬರುತ್ತಾರೆ ಎಂಬ ಸುದ್ದಿ ಹರಡಿದ ಕೂಡಲೇ, ಪಾವಗಡ ಕೆಲ ಬಂಗಾರದ ಅಂಗಡಿಗಳು ಅರ್ಧದಷ್ಟು ಅಂಗಡಿಗಳು ದಿಢೀರನೆ ಬಾಗಿಲು ಹಾಕಿಕೊಳ್ಳುತ್ತವೆ. ಈ ದೃಶ್ಯವು ನಮ್ಮ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುತ್ತದೆ.



ಭಯದ ಮೂಲ: ಪ್ರಾಮಾಣಿಕವಾಗಿ ವ್ಯಾಪಾರ ಮಾಡುವವರು ಅಧಿಕಾರಿಗಳಿಗೆ ಹೆದರುವ ಅಗತ್ಯವಿಲ್ಲ. ಆದರೆ ಸ್ಟಾಕ್ ರಿಜಿಸ್ಟರ್ ನಿರ್ವಹಿಸದ, ಕಳ್ಳಸಾಗಣೆ ಚಿನ್ನ ಹೊಂದಿರುವ ಮತ್ತು ಬಿಲ್ ಇಲ್ಲದೆ ವ್ಯವಹಾರ ಮಾಡುವ ವರ್ತಕರು ಕಾನೂನಿನ ಕೈಗೆ ಸಿಗದಂತೆ ತಪ್ಪಿಸಿಕೊಳ್ಳಲು ಬಾಗಿಲು ಮುಚ್ಚುತ್ತಾರೆ.

ಕಾರ್ಮಿಕರ ಬಳಕೆ: ತಪಾಸಣೆ ನಡೆಯುವಾಗ ಅಂಗಡಿಯ ಕೆಲಸಗಾರರನ್ನು ಮುಂಚೂಣಿಗೆ ಬಿಟ್ಟು ಮಾಲೀಕರು ನಾಪತ್ತೆಯಾಗುತ್ತಾರೆ. ಇದು ಕಾನೂನು ಪಾಲನೆಯಲ್ಲಿರುವ ಬೇಜವಾಬ್ದಾರಿಯನ್ನು ತೋರಿಸುತ್ತದೆ.

ವಹಿವಾಟಿನಲ್ಲಿ ಪಾರದರ್ಶಕತೆಯ ಕೊರತೆ ಅಧಿಕಾರಿಗಳ ಮೌನಕ್ಕೆ ಕಾರಣವೇನು?

ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಈ ಪಾವಗಡ ಭಾಗದತ್ತ ಸುಳಿಯದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ವಾರ್ಷಿಕ ಕೋಟ್ಯಂತರ ರೂಪಾಯಿ ವಹಿವಾಟು ನಡೆಸುವ ಅಂಗಡಿಗಳ ಮೇಲೆ ಯಾವುದೇ ತಪಾಸಣೆ ನಡೆಯುತ್ತಿಲ್ಲ. "ತೆರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಅಂಗಡಿ ಮಾಲೀಕರು ಪರಸ್ಪರ ಕೈಜೋಡಿಸಿರಬಹುದು, ಮಾಮೂಲಿ ಎಂಬಂತೆ ಹಣ ಸಂದಾಯವಾಗುತ್ತಿರುವುದರಿಂದಲೇ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ" ಎಂಬ ಸಂಶಯ ಸಾರ್ವಜನಿಕರಲ್ಲಿ ದಟ್ಟವಾಗಿದೆ.

ಪರವಾನಗಿ ಇಲ್ಲದ ವ್ಯವಹಾರ

ಕೆಲವು ಮಳಿಗೆಗಳು ಕನಿಷ್ಠ ಪರವಾನಗಿ ಕೂಡ ಇಲ್ಲದೆ ಅಥವಾ ಅವಧಿ ಮೀರಿದ ಪರವಾನಗಿಗಳೊಂದಿಗೆ ರಾಜಾರೋಷವಾಗಿ ಕಾರ್ಯಾಚರಿಸುತ್ತಿವೆ. ದಾಸ್ತಾನು ಮತ್ತು ಮಾರಾಟದ ಲೆಕ್ಕಪತ್ರಗಳ ನಡುವೆ ಯಾವುದೇ ತಾಳೆಯಾಗುತ್ತಿಲ್ಲ. ಇಷ್ಟೆಲ್ಲಾ ಅಕ್ರಮಗಳು ಕಣ್ಣೆದುರೇ ನಡೆಯುತ್ತಿದ್ದರೂ ಸಂಬಂಧಪಟ್ಟ ಇಲಾಖೆ ಮೌನ ವಹಿಸಿರುವುದು ಅಚ್ಚರಿ ಮೂಡಿಸಿದೆ.

ನಂಬಿಕೆಯೇ ಬಂಡವಾಳ: ಅಕ್ರಮಗಳ ನಡುವೆ ಮಿನುಗಿತ್ತಿರುವ ಪ್ರಾಮಾಣಿಕ ಚಿನ್ನದ ಕೆಲವು ವರ್ತಕಕರು ವ್ಯವಹಾರವನ್ನು ಮುಂದುವರಿಸುತ್ತಾರೆ. "ನಮ್ಮಲ್ಲಿ ಪಾರದರ್ಶಕತೆ ಇದ್ದಾಗ ನಾವುವಂಚನೆಗೂ ಹೆದರಬೇಕಿಲ್ಲ" ಎನ್ನುವುದು ಇಂತಹ ನಿಷ್ಠಾವಂತ ವರ್ತಕರ ಅಭಿಮತ.

ನಂಬಿಕೆಯೇ ಈ ಉದ್ಯಮದ ಜೀವಾಳ : ತಪಾಸಣೆ ಅಧಿಕಾರಿಗಳು ಬರುತ್ತಿದ್ದಂತೆ ಅಂಗಡಿಗಳ ಬಾಗಿಲು ಮುಚ್ಚಿ ಓಡಿಹೋಗುವ ವರ್ತಕರ ನಡುವೆ, ಇಂದಿಗೂ ಕೆಲವೇ ಕೆಲವು ಅಂಗಡಿಗಳು ತಮ್ಮ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯಿಂದ ಜನತೆಯ ನಂಬಿಕೆಯನ್ನು ಉಳಿಸಿಕೊಂಡು ಮಾರುಕಟ್ಟೆಯಲ್ಲಿ ಹೆಮ್ಮರವಾಗಿ ಬೆಳೆದಿವೆ. ಚಿನ್ನದ ಉದ್ಯಮವು ಕೇವಲ ಹಣದ ವ್ಯವಹಾರವಲ್ಲ, ಅದು ಪೀಳಿಗೆಯಿಂದ ಪೀಳಿಗೆಗೆ ಹರಿದುಬರುವ ನಂಬಿಕೆಯ ಸೇತುವೆ. ಮಾರುಕಟ್ಟೆಯಲ್ಲಿ ನೂರಾರು ಹೊಸ ಅಂಗಡಿಗಳು ತಲೆ ಎತ್ತಿದರೂ, ಗ್ರಾಹಕರು ಇಂದಿಗೂ ಹಳೆಯ ಮತ್ತು ನಂಬಿಕಸ್ತ ಅಂಗಡಿಗಳನ್ನೇ ಹುಡುಕಿಕೊಂಡು ಹೋಗುತ್ತಾರೆ. ಇದಕ್ಕೆ ಮುಖ್ಯ ಕಾರಣ ಅವರು ಪಾಲಿಸಿಕೊಂಡು ಬಂದಿರುವ 'ಪ್ರಾಮಾಣಿಕತೆ'. ಕಾನೂನುಬದ್ಧವಾಗಿ ಸ್ಟಾಕ್ ರಿಜಿಸ್ಟರ್ ನಿರ್ವಹಿಸುವ ಮತ್ತು ಸರಿಯಾಗಿ ತೆರಿಗೆ ಪಾವತಿಸುವ ವರ್ತಕರು ಎದೆಗುಂದದೆ ತಮ್ಮ ವ್ಯಾಪಾರ ವಹಿವಾಟು ನಡೆಸಿಕೊಂಡು ಹೋಗುತ್ತಿದ್ದಾರೆ.

ಸೇಲ್ಸ್ ಟ್ಯಾಕ್ಸ್ ಅಥವಾ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಮಾರುಕಟ್ಟೆಗೆ ಭೇಟಿ ನೀಡಿದಾಗ, ಕಳ್ಳಾಟ ಆಡುವ ವರ್ತಕರು ಬಾಗಿಲು ಹಾಕಿ ನಾಪತ್ತೆಯಾಗುತ್ತಾರೆ. ಪಾವಗಡದ ಇಂತಹ ಅಕ್ರಮ ಮಳಿಗೆಗಳ ಮೇಲೆ ಉನ್ನತ ಮಟ್ಟದ ಅಧಿಕಾರಿಗಳು ಕೂಡಲೇ ದಾಳಿ ನಡೆಸಬೇಕು. ಅಧಿಕಾರಿಗಳು ಮತ್ತು ವರ್ತಕರ ನಡುವಿನ ಸಂಬಂಧದ ಬಗ್ಗೆಯೂ ತನಿಖೆಯಾಗಬೇಕು ಹಾಗೂ ತೆರಿಗೆ ವಂಚಕರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರರ ದೃಷ್ಟಿಯಲ್ಲಿ ಆದರ್ಶ ಭಾರತ

ಇಡೀ ವಿಶ್ವದಾದ್ಯಂತ ಅತೀ ಹೆಚ್ಚು ಪ್ರತಿಮೆಗಳನ್ನ ಹೊಂದಿರುವಂತಹ, ವಿಶ್ವದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನಶೀಲ ವ್ಯಕ್ತಿಯಾಗಿ ಉಳಿದುಕೊಂಡ ಜಗತ್ತಿನ ಏಕಮಾತ್ರ ವ್ಯಕ್ತಿ, ಶಕ್ತಿ ಎಂದರೇ ಅದು ಡಾ. ಬಿ.ಆರ್. ಅಂಬೇಡ್ಕರ್. ವಿಶ್ವದ ಜನ ಬಾಬಾ ಸಾಹೇಬರ ಜ್ಞಾನ, ಆದರ್ಶ ಜೀವನವನ್ನು ಅನುಸರಿಸಿ ಗೌರವಿಸಿದರು. ಆದರೆ, ಭಾರತದಲ್ಲೊಂದಷ್ಟು ಭಿನ್ನ, ಯಾಕೆಂದರೆ ಇಲ್ಲಿಯವರೆಗೂ ಈ ದೇಶ ಬಾಬಾ ಸಾಹೇಬರನ್ನು ಅವರಲ್ಲಿದ್ದಂತ ಜ್ಞಾನ, ಆದರ್ಶ ಗುಣಗಳಿಂದ ನೋಡಲಿಲ್ಲ, ಬರೀ ಜಾತಿ ಎಂಬ ಪೊರೆ ಬಂದಿರುವ ಕಣ್ಣಿನಿಂದಲೇ ನೋಡಿದೆ. ನೈಜ ಬಾಬಾ ಸಾಹೇಬರ ಚಿಂತನೆಗಳನ್ನ ನೋಡಬೇಕಾದರೆ, ಅರ್ಥೈಸಿಕೊಳ್ಳಬೇಕಾದರೆ ಜಾತಿಯತೆಯ ಕಣ್ಣಿನ ಪೊರೆ ಕಳಚಿದಾಗಷ್ಟೇ ಸಾಧ್ಯ. ಭಾರತದಾದ್ಯಂತ ಬಹುತೇಕ ಪ್ರದೇಶಗಳಲ್ಲಿ ಬಲಗೈ ತೋರ್ಬೆರಳು ಮಾರ್ಗದರ್ಶಕರಾಗಿ, ಎಡಗೈನಲ್ಲಿ ಸಂವಿಧಾನ ಹಿಡಿದು ಕೊಂಡಿರುವ ಅಂಬೇಡ್ಕರ್ ಪ್ರತಿಮೆಗಳು ಕಾಣಸಿಗುತ್ತವೆ.. ಅದರಲ್ಲೂ ಎರಡು ಪ್ರಮುಖ ಜಾಗದಲ್ಲಿ ಇದ್ದೆ ಇರುತ್ತವೆ.

1. ಶಾಸಕಾಂಗ ಭವನ/ ಸರ್ಕಾರಿ ಕಚೇ ಮುಂದೆ
2. ಶೋಷಿತರ ಕೇರಿಗಳಲ್ಲಿ,

ಈ ಎರಡು ಪ್ರದೇಶದ ಭೌಗೋಳಿಕ ವಿವರ ಸಾರ್ವಜನಿಕ ವಲಯದಲ್ಲಿ ಅಂಬೇಡ್ಕರ್ ಬಗೆಗಿನ ಗ್ರಹಿತಗಳನ್ನ ಹೇಳುತ್ತವೆ.

ಮೊದಲನೇ ವರ್ಗದ ಪ್ರಕಾರ ಬಾಬಾ ಸಾಹೇಬರನ್ನ ಗೌರವಿಸಲು ಒಂದೇ ಒಂದು ಕಾರಣ ಸಂವಿಧಾನ ಕತೃundefined ಮತ್ತು ಇತಿಹಾಸ ಪುರುಷ. ಎರಡನೇ ವರ್ಗದ ಜನರು ಗೌರವಿಸಲು ಹುಟ್ಟಿನಿಂದಲೇ ಅಸ್ಪೃಶ್ಯತೆ ಆಚರಿಸಬೇಕಾದ ಕೊಳಕನ್ನ ಕಿತ್ತೊಗೆದ, ಬಹುಜನ ವಿಮೋಚನಕಾರ, ಸಾಮಾಜಿಕ ಸಮಾನತೆಯನ್ನು ಶಾಸನಬದ್ಧಗೊಳಿಸಿದ ಮಹಾನ್ ಕ್ರಾಂತಿಕಾರಿ ಎಂಬ ವಿಷಯದಿಂದ. ಇವೆರಡರ ನಡುವಿನ ವರ್ಗದ ಜನರಿಗೆ ಬಾಬಾ ಸಾಹೇಬರ ಬಗ್ಗೆ ಸಂಪೂರ್ಣ ಅರಿವಿಲ್ಲದಂತಾಗಿರುವುದೇ ವಿಪರ್ಯಾಸ.

ಅಂಬೇಡ್ಕರ್ ಎಂದರೆ ಅಸ್ಪೃಶ್ಯರ ಏಳ್ಗೆಯ ಹರಿಕಾರ ಮಾತ್ರ ಆಗಿರಲಿಲ್ಲ. ಶತಶತಮಾನಗಳ ಸ್ವಾಭಾವಿಕ ಜಾತಿಯ ಅಸಮಾನತೆ, ಅದೇ ನೆಪದಲ್ಲಿ ಮನುಷ್ಯರನ್ನು ಪ್ರಾಣಿಗಳಂತೆ ಕಾಣುತ್ತಿದ್ದ ವ್ಯವಸ್ಥೆ, ಶ್ರೇಣಿಕೃತ ಅಸಮಾನತೆಗಳ ಆಚರಣೆಯನ್ನು ವಿರೋಧಿಸುತ್ತಲೇ ತಮ್ಮ ಅಪಾರವಾದ, ಸಂಶೋಧನಾತ್ಮಕ ಅಧ್ಯಯನದಿಂದ ಭವಿಷ್ಯ ಭಾರತದ ಕನಸು ಕಂಡು, ದೇಶದಲ್ಲಿ ಸಮಸಮಾಜಕ್ಕೆ ಸಾಮಾಜಿಕ ನ್ಯಾಯ ವಿಧಾನವೊಂದು ಪರಿಹಾರ ಎಂದು ಭಾವಿಸಿ. ದೇಶವನ್ನು ಸರಿಯಾದ ದಿಕ್ಕು ದಿಸೆಯಲ್ಲಿ ಸಾಗುವಂತೆ ನಿರ್ದೇಶಿಸಿದ ಮಹಾನ್ ಸಂತ. ಸಾಮಾಜಿಕ ನ್ಯಾಯವನ್ನು ನಿರ್ವಚಿಸಿ ಅದರರ್ಥವನು ಎಳೆಎಳೆಯಾಗಿ ವಿಶ್ವಕ್ಕೆ ಅದರಲ್ಲೂ ಭಾರತದಂತಹ ಅಸಮಾನತೆಯ ಆಗರದ ವ್ಯವಸ್ಥೆಗೆ ತಿಳಿಸಿದ ಭಾರತದ ಶ್ರೇಷ್ಠ ಮೇಧಾವಿ ಮತ್ತು ಮಾರ್ಗದರ್ಶಕ.

ಬಾಬಾ ಸಾಹೇಬರ ಸಾಮಾಜಿಕ ನ್ಯಾಯವನ್ನು ವಿಶ್ವವೇ ಒಪ್ಪಿತು. ಭಾರತ ಸರ್ಕಾರ ಕೂಡಾ ಬಾಬಾ ಸಾಹೇಬರ ಜನ್ಮ ಶತ ಮಾನೋತ್ಸವದ ಅಂಗವಾಗಿ 14-04-1990 ರಿಂದ 14-04-1991 ರವರೆಗೆ ಸಾಮಾಜಿಕ ನ್ಯಾಯದ ವರ್ಷವೆಂದೇ ಆಚರಿಸಿತು.

ದೇಶದಲ್ಲಿ ಹುಟ್ಟಿದ ಪ್ರತಿಯೊಬ್ಬನಿಗೂ ಸಾಮಾಜಿಕ ನ್ಯಾಯ ಬೇಕೆಂದು ಕೇಳುವುದು ಅವರ ಅಧಿಕಾರ ಮತ್ತು ಹಕ್ಕು. ಸರ್ಕಾರಗಳು ಕೂಡಾ ನೀಡುವುದು ತಮ್ಮ ಆದ್ಯ ಕರ್ತವ್ಯಗಳಾಗಬೇಕು. ಈ ನೆಲದ ಮಣ್ಣಲ್ಲಿ ನೆಲೆಗೊಂಡಿದ್ದ ಅಸಮಾನತೆಗಳ ದುರಾಚಾರಗಳನ್ನ ನಾಶಮಾಡಬೇಕೆಂಬ ಆಶಯದಿಂದ ಉಂಟಾದ "ಜಾಗೃತಿ" ಯೇ ಸಾಮಾಜಿಕ ನ್ಯಾಯ.

ಬಾಬಾ ಸಾಹೇಬರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ, ಜಾಗೃತಿ ಮೂಡಿಸಿದ ಕಾಲವನ್ನ, "ಸಾಮಾಜಿಕ ನ್ಯಾಯ ಶಕೆ" ಎಂದೇ ಹೇಳುತ್ತಾರೆ. ಈ ಸಾಮಾಜಿಕ ನ್ಯಾಯ ಶಕೆಯನ್ನು "ಅಂಬೇಡ್ಕರ್ ಶಕೆ" ಎಂದೇ ಕರೆಯಬಹುದು. ಆರ್ಥಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅಸಮಾನತೆಗಳಿರದ ಸಮ ಸಮಾಜದ ನಿರ್ಮಾಣವೇ ನಮ್ಮಗಳ ಜವಾಬ್ದಾರಿಯಾಗಬೇಕು, ಜಾತಿ, ಕುಲ, ಪಂಥ, ಲಿಂಗಭೇದ, ಸಂಪನ್ನತೆ, ಸಾಮಾಜಿಕ ಅಂತಸ್ತು, ರಾಜಕೀಯ ಪ್ರಭಾವದಿಂದಲೂ ಅಸಮಾನತೆ ಸೃಷ್ಟಿಯಾಗಬಾರದೆಂದು



ಅಭಿಪ್ರಾಯಪಟ್ಟವರು.

ಬಾಬಾ ಸಾಹೇಬರು ಆರ್ಥಿಕ, ಸಾಮಾಜಿಕ, ರಾಜಕೀಯ ಸಂಬಂಧವಾದ "ನ್ಯಾಯ" ಎಂಬುದು ಜೀವನಕ್ರಮಗಳಲ್ಲಿರುವ ಎಲ್ಲಾ ಕ್ಷೇತ್ರದಲ್ಲೂ ಅನುಸರಿಸಬೇಕಾದದ್ದು ನ್ಯಾಯ ಸಮ್ಮತವೆಂದು ಅಭಿಪ್ರಾಯಪಟ್ಟವರು.

ಮೊದಲು ಸಾಮಾಜಿಕ ನ್ಯಾಯ, ನಂತರ ಆರ್ಥಿಕ ನ್ಯಾಯ, ಕೊನೆಯದಾಗಿ ರಾಜಕೀಯ ನ್ಯಾಯಕ್ಕೆ ಪ್ರಧಾನ್ಯತೆ ನೀಡುತ್ತಿದ್ದರು.

ಬಾಬಾ ಸಾಹೇಬರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ ಎಂದರೇ ಸಾಮಾಜಿಕ ಸಮಾನತೆ, ಆರ್ಥಿಕ ನ್ಯಾಯ ಎಂದರೇ ಆರ್ಥಿಕ ಸಮಾನತೆ, ರಾಜಕೀಯ ನ್ಯಾಯ ಎಂದರೇ ರಾಜಕೀಯ ಸಮಾನತೆ. ಅಸಮಾನತೆ & ತಾರತಮ್ಯ ಯಾವ ವಲಯದಲ್ಲಾಗಲಿ, ಯಾವ ರೂಪದಲ್ಲಿ ಅಸ್ತಿತ್ವ ಹೊಂದಿದ್ದರೂ ಅದು ಸಮ ಸಮಾಜದ ನೈತಿಕ ಸೂತ್ರಗಳಿಗೆ & ಮಾನವ ಗೌರವಗಳಿಗೆ ಧಕ್ಕೆ ತರುವಂತದ್ದು ಎಂದು ದೃಢವಾಗಿ ಪ್ರತಿಪಾದಿಸುತ್ತಿದ್ದರು.

ನೈತಿಕವಾದ ನ್ಯಾಯಬದ್ಧವಾದ ಸಮಾಜದ ಬುನಾದಿಯನ್ನ ಅಲುಗಾಡಿಸುವ ಜಾತಿ ಆಧಾರಿತ ಅಸಮಾನತೆಗಳು, ದುರದೃಷ್ಟವಶಾತ್ ಆದರ್ಶಯುತ ಸಾಮಾಜಿಕ ಸಂಬಂಧ ಗಳಾಗಿ ಏರ್ಪಟ್ಟಿದೆ.

ಇಂತಹ ಅನಚಾರದ ಸ್ಥಿತಿಗಳನ್ನ ಸವಾಲಾಗಿ ಎದುರಿಸುವುದಕ್ಕಾಗೇ ಒಂದು ಸದುದ್ದೇಷದಿಂದ ರೂಪಿಸಲಾಗಿರುವುದೇ ಅಂಬೇಡ್ಕರ್ ರವರ ಸಾಮಾಜಿಕ ನ್ಯಾಯ. ಸಾಮಾಜಿಕವಾಗಿ ಮೇಲ್ವರ್ಗದ ಜಾತಿಗಳು ಗೌರವಾರ್ಹತೆಗಳಿಂದಲೂ, ಕೆಳಜಾತಿ/ ತಳಸಮುದಾಯಗಳು ಅವಮಾನಕರ ಭಾವಕ್ಕೂ, ಗುರಿಯಾಗಿರುವುದು ಭಾರತೀಯ ಸಾಮಾಜಿಕ ಸ್ಥಿತಿ. ಇಂತಹ ವ್ಯವಸ್ಥೆ ಪ್ರಜಾಪ್ರಭುತ್ವ ವಿಧಾನಕ್ಕೆ, ಸಮಾನತೆ, ಸೌಭ್ರಾತೃತ್ವದಂತಹ ಭಾವನೆಗಳ ಬೆಳವಣಿಗೆಗೆ ಅವಕಾಶವೇ ಇಲ್ಲದಂತೇ ಮಾಡುತ್ತದೆ.

ಇನ್ನೂ ಆರ್ಥಿಕವಾಗಿ ಬಲಾಢ್ಯರಾದ ಈ ಸಮಾಜದಲ್ಲಿ ದೇಶದ ಪರವಾಗಿ ಮಾತಾಡುವುದು, ಸ್ವಾತಂತ್ರ್ಯಕ್ಕಾಗಿ ರಾಜಕೀಯ ಚಳುವಳಿ ರೂಪಿಸುತ್ತಿದ್ದರೂ ಆರ್ಥಿಕವಾಗಿ ಬಲಹೀನರನ್ನು ಸಂಕುಚಿತಭಾವದಿಂದ ನೋಡುವುದನ್ನ ಬಿಟ್ಟಿಲ್ಲ. ಈ ಮೇಲ್ಕಂಡ ಕಾರಣದಿಂದಲೇ ದುಂಡುಮೇಜಿನ ಪರಿಷತ್ ನಲ್ಲಿ "ರಾಜಕೀಯ ಯಂತ್ರಾಂಗ" ಸಮಾಜದ ಮನೋಭಾವನೆಗಳನ್ನು ತೆಗೆದುಕೊಂಡು ಸಮಾಜದ ಜೊತೆ ನೇರವಾಗಿ ಸಂಬಂಧ ಹೊಂದಿರಬೇಕೆಂದು ತಾವು ಆಶಿಸಿದ ಹಾಗೇಯೆ "ರಾಜಕೀಯ ನ್ಯಾಯ" ಕುರಿತಾಗಿ ಒತ್ತಡ ತಂದರು. ಬಾಬಾ ಸಾಹೇಬರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯತತ್ವ 3 ನ್ಯಾಯಗಳ ಸಮಗ್ರತೆಯಿಂದ ಕೂಡಿದೆ.

1. ಸ್ವಾತಂತ್ರ್ಯ
2. ಸಮಾನತೆ
3. ಭ್ರಾತೃತ್ವ

ಈ ಅಂಶಗಳ ಆಧಾರದ ಮೇಲೆ ರೂಪಿತವಾದ ಆರ್ಥಿಕ, ಸಾಮಾಜಿಕ, ರಾಜಕೀಯ ಸಂಬಂಧ ನ್ಯಾಯಯುತವಾದದ್ದು.

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಒಂದರ ಮೇಲೊಂದು ಅವಲಂಭಿತವಾದದ್ದು, ಇವುಗಳನ್ನು ಭಿನ್ನ ಅಂಶಗಳಾಗಿ ಕಾಣಬಾರದು. 3 ಅಂಶಗಳು ಒಟ್ಟಾಗಿ ಏರ್ಪಟ್ಟಿವೆ. ಒಟ್ಟಾಗಿಯೇ ಇರಲು ಬಿಡಬೇಕು. ಒಂದನ್ನೊಂದು ಬೇರ್ಪಡಿಸಲಾಗದು.

ಬೇರ್ಪಡಿಸುವ ದೃಷ್ಟಿಯಲ್ಲಿ ನೋಡಿದರೇ ಪ್ರಜಾಪ್ರಭುತ್ವಕ್ಕೆ ಸೋಲಾಗುವುದೆಂಬ ಖಚಿತ ಎಚ್ಚರಿಕೆ ನೀಡುತ್ತಾರೆ.

ಸಮಾನತೆ ಇಲ್ಲದ ಬಹು ಸಂಖ್ಯಾತರ ಸ್ವಾತಂತ್ರ್ಯ ಕೇವಲ ಕೆಲವೇ ಮಂದಿಗೆ ಆದ್ಯತೆ ನೀಡುತ್ತದೆ.

ಸ್ವಾತಂತ್ರ್ಯವಿಲ್ಲದ ಸಮಾನತೆ ಎಂಬುದು ವ್ಯಕ್ತಿ ಸ್ವಾತಂತ್ರ್ಯವನ್ನು ನಾಶ ಮಾಡುತ್ತದೆ. ಭ್ರಾತೃತ್ವ ಇಲ್ಲದ ಸ್ವಾತಂತ್ರ್ಯ & ಸಮಾನತೆಗಳು ಅರ್ಥಹೀನ ಮತ್ತು ಅಸಂಪೂರ್ಣವೆಂಬ ವಾದ ಮುಂದಿಡುತ್ತಾರೆ.

ಈ ಎಲ್ಲಾ ಕಾರಣಗಳಿಂದಲೇ ನಾವು ಕೇವಲ ರಾಜಕೀಯ ಸಮಾನತೆಯನ್ನು ಮಾತ್ರವೇ ಹೊಂದಿರಬಾರದು, ಸಾಮಾಜಿಕ, ಆರ್ಥಿಕ ಬುನಾದಿಗಳಿಲ್ಲದ ರಾಜಕೀಯ ಸಮಾನತೆ ಇರಲು ಸಾಧ್ಯವೇ ಇಲ್ಲಾ ಎಂಬುದೇ ಅವರ ದೃಢ ನಿರ್ಧಾರವಾಗಿತ್ತು. ಹಾಗಾಗಿ ಬಾಬಾ ಸಾಹೇಬರು ಧರ್ಮ, ಸಮಾಜ & ಸರ್ಕಾರಗಳನ್ನ ಈ ಮೂರು ಮಾನದಂಡಗಳ ಮೇಲೆ ನಿರ್ಧರಿಸಿ, ಈ ಸೂತ್ರಗಳಿಂದಲೇ ಪರೀಕ್ಷಿಸಿದರು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಗಳಿಗೆ ಬೆಂಬಲವಾಗಿ ನಿಲ್ಲದ ಆದರ್ಶ & ಸಿದ್ಧಾಂತವನ್ನು ತೀವ್ರವಾಗಿ ಖಂಡಿಸಿದರು. ದೇಶದಲ್ಲಿ ಜಾತಿವ್ಯವಸ್ಥೆ ಯಿಂದಾಗಿರುವ ತಾರತಮ್ಯ & ಅಸಮಾನತೆಗಳನ್ನ ಪ್ರೋತ್ಸಾಹಿಸುವ / ಪೋಷಿಸುವ/ ಅನುಸರಿಸುವ ಯುಕ್ತವಲ್ಲದ ಸಿದ್ಧಾಂತಗಳೊಂದಿಗೆ ತನ್ನ ಸೂತ್ರಗಳನ್ನು ರಾಜಿಗೊಳಿಸಿಕೊಳ್ಳಲಿಲ್ಲ, ಭಾರತದೇಶದ ಶ್ರೇಣಿಕೃತ ಸ್ಥಿತಿಕಂಡು ಬಾಬಾ ಸಾಹೇಬರು ಹೀಗೇಳುತ್ತಾರೆ. "ನಾನು ದೇಶದ ಲೋಪಗಳನ್ನು ಸರಿಪಡಿಸಲು ಸಿದ್ಧನಿದ್ದೇನೆ. ಕಾರಣ ಸಮಾಜ ಅಸಮಾನತೆಯಿಂದ ಕೂಡಿದೆ ಎಂದು ಭಾವಿಸಿದ್ದೇನೆ. ಯುಕ್ತವಲ್ಲದ ಆದರ್ಶಗಳನ್ನ ಪೋಷಿಸಿ ಪಾಲಿಸುವ ಸಮಾಜದಲ್ಲಿ ಜೀವಿಸುವುದಕ್ಕೆ ನಾನು ಸಿದ್ಧನಿಲ್ಲ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಆಧಾರದ ಮೇಲಿರುವ ಸಮಾಜವೇ ನನ್ನ ಆದರ್ಶ ಸಮಾಜವಾಗಿರುತ್ತದೆ". ಒಂದು ಆದರ್ಶ ಸಮಾಜವೆಂಬುದು ಒಂದು ಪ್ರದೇಶದಲ್ಲಿ ಜಾಗೃತಿಯಿಂದ ಪಡೆಯಲಾದ ಬದಲಾವಣೆಯನ್ನು ಇತರ ಪ್ರದೇಶಗಳಿಗೂ ಕೂಡ ವಿಸ್ತರಿಸುವ ಮಾರ್ಗಗಳಿಂದ ಕೂಡಿರಬೇಕು. ತಾನು ಪಡೆದಂತಹ ಪ್ರಯೋಜನಗಳನ್ನು ನಿಷ್ಕಪಟವಾಗಿ, ಪಾರದರ್ಶಕವಾಗಿ ಎಲ್ಲರ ಪಾಲನ್ನು ಸಮವಾಗಿ ಹಂಚುವ ವಿಧವಾಗಿರಬೇಕು. ಒಂದು ಆದರ್ಶ ಸಮಾಜ ಈ ರೀತಿಯಲ ಅನೇಕ ಮಾರ್ಗಗಳನ್ನು ಹೊಂದಿರಬೇಕು.

ಈಗಾದಗಷ್ಟೇ ಆದರ್ಶ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

ಆದರ್ಶ ಸಮಾಜದಲ್ಲಿ "ಸಾಮಾಜಿಕ ಮನಸ್ಸಾಕ್ಷಿ" ಬಹುಮುಖ್ಯವಾದದ್ದು, ಇದಿಲ್ಲದೇ ಹೋದರೆ ಯಾವ ಆದರ್ಶ ಸಮಾಜ ಕೂಡಾ ಭೂಮಿ ಮೇಲಿರಲು ಸಾಧ್ಯವಿಲ್ಲ, ಸಾಮಾಜಿಕ ಮನಸ್ಸಾಕ್ಷಿ ಇಲ್ಲದಿದ್ದರೇ ಇತರೇ ಸಮಾಜಮಾರಕ ಶಕ್ತಿಗಳು ಪ್ರತಿಕೂಲವಾಗಿ ಕೆಲಸ ಮಾಡುತ್ತವೆ & ಸಮಾಜಕ್ಕೆ ಇವೇ ಮಾರಕವಾಗುತ್ತವೆ.

ಭೂಮಿಯ ಮೇಲಿರುವ ಅಕ್ರಮ/ ಸಮಾಜಘಾತುಕ/ ಅನೈತಿಕವಾದ ಆದರ್ಶಗಳಿಗೆ ಯಾವುದೇ ಕಾರಣಕ್ಕೂ ಸಾಮಾಜಿಕ ಮನಸ್ಸಾಕ್ಷಿ ಇರಲಾರದು & ಸಾಮಾಜಿಕ ಮನಸ್ಸಾಕ್ಷಿ ಗಷ್ಟೆ ಇಂತಹ ಅನಿಷ್ಟ ಆದರ್ಶಗಳನ್ನೆದುರಿಸಿ ನಿಲ್ಲುವ ಶಕ್ತಿ ಇರುತ್ತದೆ.

ಸಾಮಾಜಿಕ ಮನಸ್ಸಾಕ್ಷಿ ಯಾವಾಗಲೂ ಸಾಮಾಜಿಕನ್ಯಾಯ, ಶಾಂತಿ, ಪ್ರಗತಿಗಾಗಿ ಹೋರಾಡುತ್ತಲೇ ಇರುತ್ತದೆ. ಮಾನವ ಸಂಭಂಧಗಳಲ್ಲಿ ಸ್ವಾತಂತ್ರ್ಯ, ಸಮಾನತೆ ತರುವ ಅತ್ಯಂತ ತೀಕ್ಷ್ಣ ಮತ್ತು ಪ್ರಖರ ಆಯುಧಗಳಾಗಿ ನಿಲ್ಲುತ್ತವೆ.




ಆದರ್ಶ ಸಮಾಜವೆಂಬುದು ಪ್ರಧಾನವಾಗಿ ಅಭಿವೃದ್ಧಿ, ಪ್ರಜಾಪ್ರಭುತ್ವ ಕಲ್ಪನೆಯಿಂದಕೂಡಿದ್ದು ಆಡಳಿತಗಾರರು ಸಾಮಾನ್ಯರ ಮೇಲೆ ಹೇರುವ ಆಧಿಪತ್ಯವನ್ನು ತಿದ್ದಿ ತೀಡುವ ಶೋಷಣೆಮುಕ್ತ ಸಮಾಜ ನಿರ್ಮಿಸುವ ಕೆಲಸ ನಿರ್ವಹಿಸುವುದರಲ್ಲಿ ಸಂದೇಹವಿಲ್ಲಾ ಎಂದೇಳುತ್ತಾರೆ.

ಈ ಎಲ್ಲಾ ಚಿಂತನೆಗಳನ್ನ ತನ್ನ ಆಳವಾದ, ಸಂಶೋಧನಾತ್ಮಕ ಅಧ್ಯಯನದಿಂದ ಅಸಮಾನತೆಮುಕ್ತ ಭವಿಷ್ಯ ಭಾರತದ ನಿರ್ಮಾಣಕ್ಕೆ ಬಾಬಾ ಸಾಹೇಬರು ಅಡಿಗಲ್ಲಾಕಿದರು.

ಬಾಬಾ ಸಾಹೇಬರ ಸಾಮಾಜಿಕ ನ್ಯಾಯ ಕಪೋಲಕಲ್ಪಿತವಾದದ್ದಲ್ಲಾ. ಅದು ಸೈದ್ಧಾಂತಿಕವಾದದ್ದು, ನ್ಯಾಯಯುತವಾದದ್ದು, ಇಂತಹ ಮಾರ್ಗದರ್ಶನವನ್ನು/ ಚಿಂತನೆಗಳನ್ನು ಸರ್ಕಾರ ಜಾರಿಗೆ ತರಲು ಸಾಧ್ಯವಾಗುವ ವಿಧಾನ, ಸಮಾಜವೂ ಕೂಡಾ ಅನುಸರಿಸಲು ಸಾಧ್ಯವಾಗುವ ವಿಧಾನ ಏಕೆಂದರೇ ಬಾಬಾ ಸಾಹೇಬರು ತನ್ನ ಹುಟ್ಟಿನಿಂದಿಡಿದು, ಬಾಲ್ಯ, ಶಿಕ್ಷಣ, ಹೋರಾಟ ಅಂತಿಮವಾಗಿ ಬೌದ್ಧ ಧಮ್ಮ ಸ್ವೀಕರಿಸುವವರೆಗಿನ ಶ್ರೇಣಿಕೃತ ಸಮಾಜದ ವ್ಯವಸ್ಥೆ, ಅಸಮಾನತೆ, ತಾರತಮ್ಯಗಳಿಂದ ತಮ್ಮ ಜೀವಿತಾವಧಿಯುದ್ದಕ್ಕೂ ಹೋರಾಡಿದ ಅನುಭವದಿಂದ್ದಾಗಿದ್ದೆ.

ಬಾಬಾ ಸಾಹೇಬರ ಆದರ್ಶ ಚಿಂತನೆಗಳನ್ನ ಯುವಜನತೆ, ಸರ್ಕಾರ, ಸಮಾಜ ಅನುಸರಿಸುವುದರಿಂದ & ಅನುಷ್ಠಾನಗೊಳಿಸುವುದರಿಂದಷ್ಟೆ ಭಯಮುಕ್ತ, ಶೋಷಣೆಮುಕ್ತ, ಜಾತಿಮುಕ್ತ, ಕೋಮುಮುಕ್ತ, ತಾರತಮ್ಯಮುಕ್ತ ಸಮಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

"ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಿಲ್ಲದೇ ರಾಜಕೀಯ ಪ್ರಭುತ್ವ ಅರ್ಥಹೀನ". ಎಂದು ಬಾಬಾ ಸಾಹೇಬರು ಯಾಕೆ ಹೇಳಿದರು..?

ಬಾಬಾ ಸಾಹೇಬರ ದೃಷ್ಟಿಯಲ್ಲಿ ಹೋರಾಟ ಎಂದರೇನು..?

ಹೋರಾಟ ಎಲ್ಲಿಗೆ ಬಂದು ನಿಂತಿದೆ. ಯಾವುದಕ್ಕಾಗಿ ಹೋರಾಡಬೇಕೆಂದು ಯುವಜನತೆ ಸಮಾಜ ತೀರ್ಮಾನಿಸಬೇಕಿದೆ..

ಸಾಮಾಜಿಕ ನ್ಯಾಯದಂತಹ ಒಂದು ಶ್ರೇಷ್ಠ ನ್ಯಾಯಯುತ ಸಮಾಜದ ಹುಟ್ಟಿಗೆ ಕಾರಣರಾದವರು ದೂರದೃಷ್ಟಿಯುಳ್ಳ, ಪ್ರಮಾಣಿಕತೆಯಿರುವ "ಶ್ರೇಷ್ಟ ಮಾರ್ಗ ಪ್ರವರ್ತಕ" ವಿಶ್ವ ಜ್ಞಾನಿ ಬಾಬಾ ಸಾಹೇಬ್ ಡಾ. ಭೀಮ್ ರಾವ್ ಅಂಬೇಡ್ಕರ್ ರವರು..

ಜೈ ಭೀಮ್



ಮಂಜುನಾಥ್ ಹೆತ್ತೇನಹಳ್ಳಿ
ಅಂಬೇಡ್ಕರ್ ಅನುಯಾಯಿಗಳು
ಮತ್ತು ಯುವ ಬರಹಗಾರರು

# ಡಾ. ಬಿ.ಆರ್.ಅಂಬೇಡ್ಕರ್‌ರವರ ಸ್ವಾತಂತ್ರ್ಯ ಸಮಾನತೆ ಭ್ರಾತೃತ್ವವನ್ನು ಪ್ರತಿಪಾದಿಸಬೇಕಾಗಿದೆ

"ಭಾರತದ ಪ್ರಾಚೀನ ಭಾರತದ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಇದರ ಅರ್ಥ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎಂಬುದಲ್ಲ. ಮನುವಾದಿ ಲೇಖಕರು ಮಹಿಳೆಯರನ್ನು ಮತ್ತು ಮಕ್ಕಳನ್ನು ರಂಜಿಸಲೆಂದು ರಚಿಸಿದ ಪುರಾಣ ಕಥೆಯನ್ನಾಗಿ ಮಾಡಿದ್ದಾರೆ."

ಇಂದು ದೇಶವು ರಾಷ್ಟ್ರದ ಮಹಾನ್ ನೇತಾರ, ಭಾರತದ ಶ್ರೇಷ್ಠ ಮಾನವತಾವಾದಿ, ಪ್ರಜಾತಂತ್ರವಾದಿ, ಶಿಕ್ಷಣತಜ್ಞ, ಆರ್ಥಿಕತಜ್ಞ, ಸಾಮಾಜಿಕ ತಜ್ಞ, ರಾಜಕೀಯ ಪಂಡಿತ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಇಂದಿನ ಮಧ್ಯಪ್ರದೇಶದ ಮೆಹು ಎಂಬಲ್ಲಿ 1891 ಏಪ್ರಿಲ್ 14ರಂದು ರಾಮ್‌ಜಿ ಸತ್ಪಾಲ್ ಮತ್ತು ಭೀಮಾಬಾಯಿ ದಂಪತಿಗಳ 14ನೇ ಮಗುವಾಗಿ ಅಂಬೇಡ್ಕರ್ ಜನನ.

## ಡಾ. ಬಿ.ಆರ್.ಅಂಬೇಡ್ಕರ್ ವಿದ್ಯಾಭ್ಯಾಸ




1896ರಲ್ಲಿ ಅಂಬೇಡ್ಕರ್‌ಗೆ ಪ್ರಾಥಮಿಕ ಶಾಲಾ ಶಿಕ್ಷಣ ಆರಂಭ. ಮಹಾರಾಷ್ಟ್ರದ ಸತಾರಕ್ಕೆ ಬಂದರು. ಸರ್ಕಾರಿ ಮಾಧ್ಯಮಿಕ ಶಾಲೆಗೆ ಪ್ರವೇಶ. 1904ರಲ್ಲಿ ಮುಂಬೈಯ ಎಲ್ಫಿನ್‌ಸ್ಟನ್ ಪ್ರೌಢಶಾಲೆಯಲ್ಲಿ ಪ್ರವೇಶ 1970ರಲ್ಲಿ ಅಂಬೇಡ್ಕರ್ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾಗಿ ಆ ಶಾಲೆಯಲ್ಲಿ ಮೆಟ್ರಿಕ್ಯುಲೇಶನ್ ದಾಟಿದ ಪ್ರಥಮ ಅಸ್ಪೃಶ್ಯ ವಿದ್ಯಾರ್ಥಿ ಎನ್ನಿಸಿದರು. ಬರೋಡಾ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರು ತಿಂಗಳಿಗೆ 20 ರೂಪಾಯಿ ಶಿಷ್ಯವೇತನ ಮಂಜೂರು ಮಾಡಿ ಅಂಬೇಡ್ಕರ್‌ರವರು ವಿದ್ಯಾಭ್ಯಾಸ ಪಡೆಯಲು ಸಹಾಯ ಮಾಡಿದರು. ಡಾ. ಬಿ.ಆರ್. ಅಂಬೇಡ್ಕರ್‌ರವರು 1912ರಲ್ಲಿ ಬಿ.ಎ. ಪದವೀಧರರಾದರು. 1913ರಲ್ಲಿ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳಿದ ಪ್ರಥಮ ಅಸ್ಪೃಶ್ಯ ವಿದ್ಯಾರ್ಥಿ ಎಂಬ ಕೀರ್ತಿಗೂ ಭಾಜನರಾದರು. ಡಾ. ಬಿ.ಆರ್. ಅಂಬೇಡ್ಕರ್‌ರವರು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಎ.ಗೆ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ, ಮಾನವಶಾಸ್ತ್ರ ಮತ್ತು ರಾಜನೀತಿಗಳನ್ನು ಅಧ್ಯಯನ ಮಾಡಿ ಂಟಿಛಿಜಟಿಣ ಋಟಿಜುಚಿಟಿ ಅಂಟಟಜಡಿಛಿಜ ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ 1915ರಲ್ಲಿ ಎಂ.ಎ. ಪದವಿ ಪೂರೈಸಿದರು.

## ಡಾ. ಬಿ.ಆರ್. ಅಂಬೇಡ್ಕರ್‌ರವರನ್ನ ಪರಿಚಯಿಸಿದವರು

ಛತ್ರಪತಿ ಸಾಹು ಮಹಾರಾಜ್‌ರವರು ಮಾರ್ಚ್ 21, 1920ರಲ್ಲಿ ಮಾನ್‌ಗಾಂವ್‌ನಲ್ಲಿ ನಡೆದ ಮಹರ್ ಸಮ್ಮೇಳನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಜಗತ್ತಿಗೆ ಪರಿಚಯಿಸಿ, "ಸಾಮಾಜಿಕ ಪರಿವರ್ತನೆಯ ಚಳುವಳಿಯನ್ನು ಇನ್ನುಮುಂದೆ ದೇಶಾದ್ಯಂತ ಡಾ. ಬಿ.ಆರ್. ಅಂಬೇಡ್ಕರ್ ಮುನ್ನಡೆಸುತ್ತಾರೆ" ಎಂದು ಘೋಷಿಸಿದರು.

## ಪ್ರಜಾತಂತ್ರವಾದಿ ಅಂಬೇಡ್ಕರ್

ದೇಶದಲ್ಲಿ ಎಲ್ಲರಿಗೂ ಮತದಾನದ ಹಕ್ಕು ಹಾಗೂ ರಾಜಕೀಯ ಪ್ರಾತಿನಿಧ್ಯ ಇರಲಿಲ್ಲ. ಕೇವಲ ಆರಂಭದಲ್ಲಿ 3 ವರ್ಗಗಳಿಗೆ ಇತ್ತು. 1) ಯಾರು ಪದವಿಯನ್ನ ಪಡೆದುಕೊಂಡಿದ್ದಾರೆ. 2) ಯಾರು ತೆರಿಗೆಯನ್ನು ಕಟ್ಟುತ್ತಿದ್ದರು 3) ಬ್ರಾಹ್ಮಣರಿಗೆ ಮಾತ್ರ ಇತ್ತು. ಆದರೆ ಡಾ. ಬಿ.ಆರ್. ಅಂಬೇಡ್ಕರ್‌ರವರು 1909ರಲ್ಲಿ ಇಂಡಿಯನ್ ಕೌನ್ಸಿಲ್ ಕಾಯ್ದೆ ಮತ್ತು 1918ರಲ್ಲಿ ಸೌತ್ ಬರೋ ಆಯೋಗದ ಮುಂದೆ ಸಾಕ್ಷಿ ನೀಡಿದ ಡಾ. ಬಿ.ಆರ್. ಅಂಬೇಡ್ಕರ್‌ರವರು ಶೂದ್ರರಿಗೆ ಮತ್ತು ಶೋಷಿತ ವರ್ಗಗಳಿಗೆ ಮತದಾನದ ಹಕ್ಕು ಮತ್ತು ಪ್ರತ್ಯೇಕ ಚುನಾಯಕಗಳನ್ನು ನೀಡುವಂತೆ ಒತ್ತಾಯಿಸಿದರು. ಇದರ ಪರಿಣಾಮವಾಗಿ 1919ರ ಗೌರ್ನಮೆಂಟ್ ಆಫ್ ಇಂಡಿಯಾ ಕಾಯಿದೆಯು ಜಾರಿಯಾಯಿತು. ಕೇಂದ್ರ ಮತ್ತು ಪ್ರಾಂತೀಯ ಪ್ರತಿನಿಧಿ ಮಂಡಳಿಗಳಿಗೆ



ಪ್ರಥಮ ಬಾರಿಗೆ ಶೋಷಿತ ವರ್ಗಗಳು ಮತ್ತು ಶೂದ್ರರನ್ನು ನಾಮಕರಣ ಮಾಡುವ ಕಾನೂನು ಜಾರಿಯಾಯಿತು. ಸಮಾಜದಲ್ಲಿ ಏಕಸ್ವಾಮ್ಯವನ್ನು ನಾಶಗಳಿಗೆ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಿರುವ ಒಬ್ಬ ವ್ಯಕ್ತಿ ಒಂದು ವೋಟು ಎಂಬ ಮೌಲ್ಯ ವಿಸ್ತರಣೆಗೊಂಡಿತು. "ಒಬ್ಬ ವ್ಯಕ್ತಿ ಒಂದು ಮೌಲ್ಯ"ವಾಗುವುದಿಲ್ಲವೋ ಅಲ್ಲಿಯತನಕ ನಮ್ಮ ದೇಶ ನಿಜವಾದ ಅರ್ಥದಲ್ಲಿ ಪ್ರಜಾತಂತ್ರ ದೇಶವಾಗುವುದಿಲ್ಲ. "ನಮಗೆ ದೇಶದಲ್ಲಿ ರಾಜಕೀಯ ಸಮಾನತೆ ಮಾತ್ರ ಸಿಕ್ಕಿದೆ. ಸಾಮಾಜಿ ಮತ್ತು ಆರ್ಥಿಕ ಅಸಮಾನತೆ ಇನ್ನೂ ಇದೆ. ಆದಷ್ಟು ಬೇಗ ಈ ಅಸಮಾನತೆಯನ್ನು ಬಗೆಹರಿಸದಿದ್ದರೆ ಅಸಮಾನತೆಗೆ ಒಳಗಾದ ಜನ ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ" ಎಂದು ಎಚ್ಚರಿಕೆ ನೀಡಿದರು.

## ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಪೂನಾ ಒಪ್ಪಂದ

ಡಾ. ಬಿ.ಆರ್. ಅಂಬೇಡ್ಕರ್‌ರವರು ಲಂಡನ್‌ನಲ್ಲಿ ನಡೆದ 3 ದುಂಡುಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿ ಶೂದ್ರರಿಗೆ ಹಾಗು ಎಲ್ಲಾ ಶೋಷಿತ ವರ್ಗಗಳಿಗೆ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳಿಗಾಗಿ ವಾದ ಮಾಡಿದರು. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾಯಕಗಳನ್ನು ನೀಡಬೇಕೆಂಬ ಅಂಬೇಡ್ಕರ್‌ರವರ ಒತ್ತಾಯವನ್ನು ಮಹಾತ್ಮಗಾಂಧಿ ವಿರೋಧಿಸಿದರು. ಅಂಬೇಡ್ಕರ್ ವಾದವನ್ನು ಗೌರವಿಸಿ ಬ್ರಿಟಿಷ್ ಸರ್ಕಾರವು ಆಗಸ್ಟ್ 17, 1932ರಂದು ಒಂದು ಆದೇಶ ಹೊರಡಿಸಿ ಶೋಷಿತರಿಗೆ ವಿಶೇಷ ಚುನಾಯಕಗಳನ್ನು ನೀಡಿದರು. ಈ ವಿಶೇಷ ಚುನಾಯಕಗಳ ವಿರುದ್ಧ ಎಂ.ಕೆ.ಗಾಂಧಿ ಅಮರಣಾಂತ ಉಪವಾಸವನ್ನು ಯರವಾಡ ಜೈಲಿನಲ್ಲಿ ಆರಂಭಿಸುತ್ತಾರೆ. ಈ ಸಮಯದಲ್ಲಿ ಅಂಬೇಡ್ಕರ್‌ರವರು ಹಲವು ಒತ್ತಡಗಳಿಗೆ ಮಣಿದು ಸೆಪ್ಟಂಬರ್ 24, 1932ರಂದು ಗಾಂಧೀಜಿ ಮತ್ತು ಅಂಬೇಡ್ಕರ್ ನಡುವೆ ಪೂನಾ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರಿಂದ ಅಂಬೇಡ್ಕರ್‌ರವರು ತನ್ನ ಜನರು ಈ ದೇಶವನ್ನು ಆಳುವ ಕನಸು ಕಾಣಬೇಕು ಎಂದು ಎದ್ದ ಅಂಬೇಡ್ಕರ್‌ರವರ ಆಸೆ ನುಚ್ಚುನೂರಾಯಿತು ಮತ್ತು ಚಮಚಾ ಯುಗಕ್ಕೆ ತಳ್ಳಲ್ಪಟ್ಟಿತು. ಅಂಬೇಡ್ಕರ್‌ರವರು 1936ರಲ್ಲಿ "ಸ್ವತಂತ್ರ ಕಾರ್ಮಿಕ ಪಕ್ಷ"ವನ್ನು ಸ್ಥಾಪಿಸಿದರು. ಅದಕ್ಕೆ "ಆನೆ" ಚಿಹ್ನೆಯನ್ನಾಗಿ, ನೀಲಿ ಬಾವುಟವನ್ನಾಗಿ ಇಟ್ಟುಕೊಂಡು ಆಗಸ್ಟ್ 17, 1937ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ 151 ಮೀಸಲು ಕ್ಷೇತ್ರಗಳಲ್ಲಿ ಕೇವಲ 17 ಸ್ಥಾನಗಳಿಗೆ ಸ್ಪರ್ಧಿಸಿ 15 ಸ್ಥಾನಗಳನ್ನು ಗಳಿಸಿತು. 78 ಕಡೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಅವಿದ್ಯಾವಂತರು ಗೆದ್ದರು. ಅಂಬೇಡ್ಕರ್ ಮಂಡಿಸಿದ ಎಲ್ಲಾ ಮಸೂದೆಗಳನ್ನು ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಅವಿದ್ಯಾವಂತ ಜನಪ್ರತಿನಿಧಿಗಳು ವಿರೋಧಿಸುತ್ತಿದ್ದರು. ಇದನ್ನೆಲ್ಲ ಕಂಡ ಅಂಬೇಡ್ಕರ್‌ರವರು "ಅಸ್ಪೃಶ್ಯ ನಾಯಕರೆಲ್ಲರೂ ಮೂಗುದಾರ ಹಾಕಿದ ಎತ್ತುಗಳ ಹಾಗೆ ಬೀಜ ಹೊಡೆದಿರುವ ಹೋರಿಗಳ ಹಾಗೆ ಕಾಂಗ್ರೆಸ್ ಪಕ್ಷದಲ್ಲಿದ್ದಾರೆ". ಶಾಸನ ಸಭೆಗಳಲ್ಲಿ ಅಸ್ಪೃಶ್ಯರಿಗೆ ಸ್ಥಾನ ಬೇಕೆಂದು ಹೋರಾಡಿದ ಮುಖ್ಯ ಉದ್ದೇಶವೇನೆಂದರೆ ಅಸ್ಪೃಶ್ಯರಿಗೆ ಆಗುತ್ತಿರುವ ಅನ್ಯಾಯಗಳನ್ನು ಶಾಸನಸಭೆಗಳಲ್ಲಿ ಪ್ರತಿಭಟಿಸಿ ಪರಿಹಾರ ಪಡೆಯುವುದಾಗಿತ್ತು. ಇಂತಹ ಮಹತ್ತರ ಉದ್ದೇಶವನ್ನು ಮಹಾತ್ಮ ಗಾಂಧೀಜಿ ಮತ್ತು ಕಾಂಗ್ರೆಸ್‌ನವರು ವಿಫಲಗೊಳಿಸಿದರು ಎಂದು ಕೊರಗಿದರು.

## ಅಂಬೇಡ್ಕರ್‌ರವರು ಸಂವಿಧಾನ ರಚನೆ ಸಭೆಗೆ ಆಯ್ಕೆ

ಬಾಂಬೆ ಪ್ರಾಂತ್ಯದಿಂದ ಎಂ.ಆರ್.ಜಯಕಾರ್‌ರವರು ವಿರುದ್ಧ ಸೋತರು ಇವತ್ತಿನ ಪಶ್ಚಿಮ ಬಂಗಾಳದ ಚಂಡಾಲರು ಜೈಶೂರ್/ಖುಲ್ನಾ ಎಂಬ ಪ್ರಾಂತ್ಯದಿಂದ ಅಂಬೇಡ್ಕರ್‌ರವರನ್ನು ಸಂವಿಧಾನದ ಕರಡು ರಚನಾ ಸಮಿತಿಗೆ ಆಯ್ಕೆ ಮಾಡಿ ಕಳುಹಿಸುತ್ತಾರೆ. ಅಂಬೇಡ್ಕರ್‌ರವರು ಬೇರೆ ಬೇರೆ ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ನಮ್ಮ ಭಾರತ ದೇಶಕ್ಕೆ ಒಳ್ಳೆಯ ಸಂವಿಧಾನವನ್ನು ರಚನೆ ಮಾಡಿಕೊಟ್ಟರು. 1950 ಜನವರಿ 26ರಂದು ಸಂವಿಧಾನವನ್ನು ಜಾರಿ ಮಾಡಿಕೊಂಡಿವೆ.

"ಬದುಕಿ ಉಳಿಯುವುದೇ ದೊಡ್ಡ ಸಾಧನೆಯಲ್ಲ, ಬದುಕಿ ಉಳಿಯಲು ಅನೇಕ ರೀತಿಗಳಿವೆ. ಎಲ್ಲ ರೀತಿಯ ಬದುಕು ನಮ್ಮ ಗೌರವ ಹಾಗೂ ಹೆಮ್ಮೆಗೆ ಅರ್ಹವಲ್ಲ. ಒಬ್ಬ ವ್ಯಕ್ತಿಯಾಗಲೀ, ಒಂದು ಸಮಾಜವಾಗಲೀ ಸುಮ್ಮನೆ ಜೀವಂತವಾಗಿ ಉಳಿಯುವುದಕ್ಕು ಘನತೆ ಗೌರವದಿಂದ ಬಾಳಿ ಬದುಕುವುದಕ್ಕೂ ವ್ಯತ್ಯಾಸವಿದೆ." ಈ ಘನತೆ ಗೌರವದಿಂದ ಬದುಕಲು ನಮ್ಮ ಸಂವಿಧಾನ ತುಂಬಾ ಮುಖ್ಯವಾಗಿದೆ.

## ಸಮಾನತೆಗಾಗಿ ಅಂಬೇಡ್ಕರ್




ಶೂದ್ರಾತಿ ಶೂದ್ರರು ಮತ್ತು ಅಸ್ಪೃಶ್ಯರು ಅನುಭವಿಸುತ್ತಿದ್ದ ಜಾತಿ, ದೌರ್ಜನ್ಯ, ತಾರತಮ್ಯ, ಮೇಲು-ಕೀಳು, ಶೋಷಣೆ, ಮೂಢನಂಬಿಕೆ, ಆರ್ಥಿಕ ಅಸಮಾನತೆ, ಸಮಾಜದಲ್ಲಿ ಕ್ರೌರ್ಯತೆ ಇವು ಎಲ್ಲವನ್ನು ಹೋಗಲಾಡಿಸಲು ಅಂಬೇಡ್ಕರ್‌ರವರು ಬಹಳ ಶ್ರಮಪಟ್ಟರು. ಶೋಷಿತ ವರ್ಗಗಳಿಗೆ ಅರಿವು ಮೂಡಿಸಲು 1920ರಲ್ಲಿ "ಮೂಕನಾಯಕ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಸಮಾಜದಲ್ಲಿ ಅಸಮಾನತೆಯ ಬಗ್ಗೆ ಕುರಿತು ಪತ್ರಿಕೆಯಲ್ಲಿ ನಿರಂತರವಾಗಿ ಪ್ರಕಟಿಸಿದರು. ಅಂಬೇಡ್ಕರ್‌ರವರು ಒಂದು ಲೇಖನದಲ್ಲಿ ಭಾರತೀಯರು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆಯುವ ಮೊದಲು ಶೂದ್ರರಿಗೆ / ಅಸ್ಪೃಶ್ಯರಿಗೆ ಸ್ವಾತಂತ್ರ್ಯ ನೀಡಬೇಕೆಂದು ಬರೆದಾಗ ಜಾತಿವಾದಿಗಳು, ಮನುವಾದಿಗಳು ಭಾರೀ ವಿರೋಧ ವ್ಯಕ್ತಪಡಿಸಿದರು. ಅಂಬೇಡ್ಕರ್‌ರವರು ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಇವು ಮೂರು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಿ ಎಲ್ಲರನ್ನೂ ಸಮಾನವಾಗಿ ಕಾಣುವುದೇ ನಿಜವಾದ ಸಮಾಜ ಎಂದು ಹೇಳಿದರು.

ಅಂಬೇಡ್ಕರ್ ಗಾಂಧೀಜಿಗೆ ಹೇಳಿದ್ದು "ದೇವರ ಕಣ್ಣಿಗೆ ಎಲ್ಲರೂ ಸಮಾನರು ಎನ್ನುವುದು ನನಗೆ ಬೇಕಿಲ್ಲ. ನನಗೆ ಬೇಕಿರುವುದು ಲೌಕಿಕ ಜೀವನದಲ್ಲಿ ಮನುಷ್ಯರ ಕಣ್ಣಲ್ಲಿ ಮನುಷ್ಯರು ಸಮಾನರು ಎನ್ನುವುದು ಬೇಕಾಗಿದೆ" ಎಂದು ಅಂಬೇಡ್ಕರ್‌ರವರ ಆಶಯವಾಗಿತ್ತು.

## ಹಿಂದುಳಿದ ವರ್ಗಗಳಿಗೆ ಅಂಬೇಡ್ಕರ್ ಕೊಡುಗೆ

ಭಾರತ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಇಲ್ಲಿ ಎಲ್ಲರೂ ಶೂದ್ರರು / ಶೋಷಿತ ವರ್ಗಗಳಿಗೆ ಯಾವುದೇ ರಾಜಕೀಯ ಅವಕಾಶಗಳು, ಮತದಾನದ ಹಕ್ಕು ಇರಲಿಲ್ಲ. ಆದರೆ ಅಂಬೇಡ್ಕರ್‌ರವರು ಸಂವಿಧಾನದ 340ನೇ ವಿಧಿಯ ಪ್ರಕಾರ ಹಿಂದುಳಿದ ವರ್ಗಗಳಿಗೆ ರಾಜಕೀಯ ಅವಕಾಶಗಳು ಮತ್ತು 27% ಮೀಸಲಾತಿಯನ್ನು ಸಂವಿಧಾನದಲ್ಲಿ ಒಬಿಸಿಗಳಿಗೆ ನೀಡಿರುವುದು, ಒಬಿಸಿ ಸಮುದಾಯಗಳು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲವಾಗಿವೆ. ಅಂಬೇಡ್ಕರ್‌ರವರು ಎಲ್ಲಾ ಸಮುದಾಯದ ಹೆಣ್ಣುಮಕ್ಕಳಿಗೆ ಆಸ್ತಿಯ ಹಕ್ಕನ್ನು ತಂದುಕೊಟ್ಟ ಮಹಾನ್ ಮಾನವತಾವಾದಿ.




## ಅಂಬೇಡ್ಕರ್ ರಾಜಿನಾಮೆ

ನನ್ನ ದೇಶದ ಪ್ರಥಮ ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ಮಾಡಿಲ್ಲ ಮತ್ತು ಮಹಿಳೆಯರಿಗೆ ಸಮಾನತೆಯನ್ನು ಪ್ರತಿಪಾದಿಸುವ "ಹಿಂದೂ ಕೋಡ್ ಬಿಲ್"ನ್ನ ವಿರೋಧಿಸಿದ ಕಾರಣ ಹಾಗೂ ಜಮ್ಮು  ಕಾಶ್ಮೀರದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದರಲ್ಲಿ ನೆಹರು ಸರ್ಕಾರ ವಿಫಲವಾಗಿದೆ. ಆದ ಕಾರಣ ಕಾನೂನು ಮಂತ್ರಿ ಸ್ಥಾನಕ್ಕೆ ರಾಜಿನಾಮೆಯನ್ನು ನೀಡಿ ಹೊರಬಂದರು.

## ಅಂಬೇಡ್ಕರ್ ಭೂಮಿಗಾಗಿ ಒತ್ತಾಯ

ಅಂಬೇಡ್ಕರ್‌ರವರು ಆರ್ಥಿಕ ಅಸಮಾನತೆಯನ್ನು ವಿರೋಧಿಸಿ ಈ ದೇಶದಲ್ಲಿ ಇರುವ ಬಡವರಿಗೆ 5 ಎಕರೆ ಜಮೀನು ನೀಡಬೇಕು. ಒಳ್ಳೆಯ ಶಿಕ್ಷಣ, ಆರೋಗ್ಯ, ವಸತಿ, ಭೂಮಿ, ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ಹೋರಾಟ ಮಾಡಿದರು. ನಾಸಿಕ್ ಕಲಾರಾಂ ದೇವಾಲಯ, ಚೌಡರ್ ಕೆರೆ ನೀರು ಮುಟ್ಟುವ ಕಾರ್ಯಕ್ರಮ ಸಮಾನತೆಗಾಗಿ ಹೋರಾಟವಾಗಿದೆ.

## ಅಂತಿಮವಾಗಿ ಅಂಬೇಡ್ಕರ್

ಹಿಂದುವಾಗಿ ಹುಟ್ಟಿ ಹಿಂದುವಾಗಿ ಸಾಯಲಾರೆ ಎಂದು ಬೌದ್ಧ ಧರ್ಮ ಸ್ವೀಕಾರ ಮಾಡಿ ಅಸ್ಪೃಶ್ಯತೆಯು ಅಸ್ಪೃಶ್ಯರನ್ನು ಹಿಂದುಗಳನ್ನು ಅಂತಿಮವಾಗಿ ಇಡೀ ದೇಶವನ್ನು ಸಹ ನಾಶಗೊಳಿಸಿದೆ. ದಮನಿತ ವರ್ಗಗಳಿಗೆ ಆತ್ಮಗೌರವ ಮತ್ತು ಸ್ವಾತಂತ್ರ್ಯ ದೊರಕಿದ್ದಾದಲ್ಲಿ ಅವರು ತಮ್ಮ ಪ್ರಗತಿ ಉನ್ನತಿಗಳನ್ನು ಸಾಧಿಸುವುದು ಮಾತ್ರವಲ್ಲ ತಮ್ಮ ಶ್ರಮ, ಬುದ್ಧಿಶಕ್ತಿ ಮತ್ತು ಧೈರ್ಯಗಳಿಂದ ದೇಶದ ಶಕ್ತಿ ಮತ್ತು ಏಳಿಗೆಗೂ ಕೊಡುಗೆ ನೀಡಬಲ್ಲರು. ಅವರು ಅಸ್ಪೃಶ್ಯತೆಯ ಕಳಂಕದ ವಿರುದ್ಧ ಹೋರಾಡಲು ವ್ಯಯ ಮಾಡಬೇಕಾಗಿರುವ ಅಗಾಧ ಶಕ್ತಿ ಸಾಮರ್ಥ್ಯಗಳು ಅವರಲ್ಲೇ ಉಳಿದಿದ್ದಾರೆ. ಅದನ್ನು ಅವರು ತಮ್ಮ ಇಡೀ ದೇಶದ ಶಿಕ್ಷಣ ಮತ್ತು ಸಂಪನ್ಮೂಲಗಳ ಅಭಿವೃದ್ಧಿಯಲ್ಲಿ ತೊಡಗಿಸುವುದು ಸಾಧ್ಯವಾಗುತ್ತಿತ್ತು. "ನಾನು ಯಾರ ಪರವಾಗಿ ಹೋರಾಡುತ್ತಿರುವೆನೋ ಅವರು ನನ್ನನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡೇ ಇಲ್ಲ. ನಾನು ಯಾರ ವಿರುದ್ಧವಾಗಿ ಹೋರಾಡುತ್ತಿರುವೆನೋ ಅವರು ನನ್ನ ಬಗ್ಗೆ ಸಂಪೂರ್ಣ ತಿಳಿದುಕೊಂಡಿದ್ದಾರೆ. ನಾನು ನನ್ನ ಜೀವನವಿಡೀ ತುಂಬಾ ಪರಿಶ್ರಮ, ದುಃಖ ದುಮ್ಮಾನಗಳನ್ನು ಎದುರಿಸಿ ನನ್ನ ವಿರೋಧಿಗಳೊಡನೆ ಹೋರಾಡಿ, ಈ ವಿಮೋಚನಾ ರಥವನ್ನು ಇಲ್ಲಿ ತಂದು ನಿಲ್ಲಿಸಿದ್ದೇನೆ. ನಿಮಗೆ ಸಾಧ್ಯವಾದರೆ ಮುನ್ನಡೆಸಿ, ಇಲ್ಲದಿದ್ದರೆ ಅಲ್ಲಿಯೇ ಬಿಟ್ಟುಬಿಡಿ. ಆದರೆ ಯಾವ ಸಂದರ್ಭದಲ್ಲೂ ಆ ರಥ ಹಿಂದೆ ಹೋಗಲು ಬಿಡಬೇಡಿ" ಎಂದು ಹೇಳಿ ಡಿಸೆಂಬರ್ 06, 1956ರಂದು ಪರಿನಿರ್ವಾಣವಾದರು, ಪ್ರಕೃತಿಯಲ್ಲಿ ಲೀನವಾದರು.



ಜೆ.ಸಿ.ರಂಗಧಾಮಯ್ಯ
ಜನಕಲೋಟಿ
ರಾಜ್ಯಶಾಸ್ತ್ರ ಉಪನ್ಯಾಸಕರು,
ತುಮಕೂರು. ಮೊ : 9964076203

# ಒಳಮೀಸಲಾತಿಗೆ ಆಗ್ರಹಿಸಿ ಅಂಬೇಡ್ಕರ್ ಜಯಂತಿ ಬಹಿಷ್ಕಾರ ಪ್ರತ್ಯೇಕ ಆಚರಣೆಗೆ ಸಂಘಟನೆಗಳ ನಿರ್ಧಾರ

ತುಮಕೂರು: ರಾಜ್ಯದಲ್ಲಿ ಒಳ ಮೀಸಲಾತಿಯನ್ನು ಜಾರಿಗೊಳಿಸಲು ವಿಳಂಬ ಮಾಡುತ್ತಿರುವ ರಾಜ್ಯ ಸರಕಾರದ ಧೋರಣೆಯನ್ನು ಖಂಡಿಸಿ ಮಾದಿಗ ಸಮುದಾಯ ಸರಕಾರ ಆಚರಿಸುವ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಅವರ ಜಯಂತಿ ಬಹಿಷ್ಕರಿಸಲಿದೆ ಎಂದು ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಡಾ.ವೈ.ಕೆ.ಬಾಲಕೃಷ್ಣಪ್ಪ ತಿಳಿಸಿದರು.



ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮುದಾಯಕ್ಕೆ ಕೊಟ್ಟಿದ್ದ ಮಾತನ್ನು ತಪ್ಪಿದ್ದಾರೆ. 35 ವರ್ಷಗಳ ಒಳಮೀಸಲಾತಿ ಹೋರಾಟವನ್ನು ನಿರ್ಲಕ್ಷಿಸಿರುವುದನ್ನು ಖಂಡಿಸಿ ರಾಜ್ಯದ ಎಲ್ಲ ಒಳಮೀಸಲಾತಿ ಹೋರಾಟಗಾರರು ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಡಾ.ಬಾಬು ಜಗಜೀವನ್ ರಾಂ ಜಯಂತಿಯನ್ನು ಬಹಿಷ್ಕರಿಸಿ ಸರ್ಕಾರದ ನಡೆಯನ್ನು ವಿರೋಧಿಸಲು ತೀರ್ಮಾನಿಸಲಾಗಿದೆ. ಎಂದರು.

ಸರ್ಕಾರದ ವತಿಯಿಂದ ಆಚರಿಸುವ ಜಯಂತಿಯನ್ನು ಬಹಿಷ್ಕರಿಸಿ ಒಳಮೀಸಲಾತಿ ಹೋರಾಟ ಸಮಿತಿ, ಮಾದರ ಮಹಾಸಭಾ, ಸಿಐಟಿಯು ನೇತೃತ್ವದಲ್ಲಿ ಪ್ರತ್ಯೇಕವಾಗಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ನಗರದ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 11 ಗಂಟೆ ಆಚರಿಸಲು ತೀರ್ಮಾನಿಸಲಾಗಿದ್ದು, ಪೌರ ಕಾರ್ಮಿಕರು ಹಾಗೂ ಶೋಷಿತ ವರ್ಗಗಳು ಒಳಮೀಸಲಾತಿ ಬೆಂಬಲಿಸುವವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಜಿ.ಪಂ.ಮಾಜಿ ಅಧ್ಯಕ್ಷ ವೈ.ಎಚ್.ಹುಚ್ಚಯ್ಯ ಮಾತನಾಡಿ ಮಾದಿಗ ಸಮುದಾಯದ ಏ.14ರಂದು ಸರಕಾರದಿಂದ ಆಚರಿಸುವ ಡಾ.ಬಾಬು ಜಗಜೀವನ್ ರಾಮ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆಗೆ ಭಾಗವಹಿಸುವುದಿಲ್ಲ. ಸರಕಾರದ ನೀತಿಗೆ ನಮ್ಮ ಧಿಕ್ಕಾರ ವ್ಯಕ್ತಪಡಿಸುತ್ತಿದ್ದೇವೆ. ನಮ್ಮ ಉಳಿವಿಗಾಗಿ ನಾವು ಹೋರಾಡುತ್ತಿದ್ದೇನೆ. ಯಾರ ಅಳಿವಿಗಾಗಿ ಅಲ್ಲ. ಸರಕಾರ ಮಾಡುವ ಅಂಬೇಡ್ಕರ್ ಜಯಂತಿಗೆ ಪ್ರತಿಭಟನೆ ರೂಪದಲ್ಲಿ ನಾವು ಭಾಗವಹಿಸುತ್ತಿಲ್ಲ. ಪ್ರತ್ಯೇಕವಾಗಿ ಆಚರಿಸುವ ಜಯಂತಿಯಲ್ಲಿ ಸ್ವಾಭಿಮಾನದ ಮಾದಿಗರು ಎಲ್ಲರೂ ತಪ್ಪದೇ ಬರಬೇಕು ಎಂದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ದಲಿತ ಮುಖಂಡರಾದ ನರಸೀಯಪ್ಪ, ಕೊಟ್ಟ ಶಂಕರ್, ಗಂಗರಾಜು, ಕೇಬಲ್ ರಘು,ಅಂಜಿನಪ್ಪ, ಗಂಗಾಧರ್, ನರಸಿಂಹಯ್ಯ, ಮಹಾಲಿಂಗಪ್ಪ, ಟಿ.ಸಿ.ರಾಮಯ್ಯ, ಮೋಹನ್ ಸೇರಿದಂತೆ ಇತರರಿದ್ದರು.

# ಕೆ.ಆರ್.ಎಸ್ ಪಕ್ಷದ ಕಾರ್ಯಕರ್ತರ ಉಪಟಳ ಸಹಿಸಲು ಸಾಧ್ಯವಿಲ್ಲ : ಕಾಂಗ್ರೇಸ್ ಕಾರ್ಯಕರ್ತರ ಖಂಡನೆ ಕಾನೂನು ಕ್ರಮಕ್ಕೆ ಒತ್ತಾಯ

ತುಮಕೂರು: ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜನತಾ ದರ್ಶನ ಕಾರ್ಯಕ್ರಮದಲ್ಲಿ ಕೆ.ಆರ್.ಎಸ್ ಪಕ್ಷದ ಕಾರ್ಯಕರ್ತರು ಮಾಡಿದ ಅಹಿತಕರ ಘಟನೆಯನ್ನು ಜಿಲ್ಲಾ ಕಾಂಗ್ರೆಸ್ ಖಂಡಿಸುತ್ತದೆ. ಉದ್ದೇಶ ಪೂರ್ವಕವಾಗಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಕೆಟ್ಟ ಹೆಸರು ತರಲು ಇಲ್ಲಸಲ್ಲದ ಆರೋಪ ಮಾಡುತಿದ್ದು, ಮುಂದವರೆದರೆ ತಕ್ಕ ಪಾಠ ಕಲಿಸುವ ಎಚ್ಚರಿಕೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರ್ ಗೌಡ ನೀಡಿದ್ದಾರೆ.




ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಪ್ರಿಲ್ 08 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 3:30 ರವರೆಗೆ ಸುಮಾರು 750ಕ್ಕೂ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿ,ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಪರಿಹಾರ ಒದಗಿಸುವ ಕೆಲಸ ಮಾಡಿದ್ದಾರೆ. ಆದರೆ ಕೊನೆಯಲ್ಲಿ ಬಂದ ಕೆ.ಆರ್.ಎಸ್ ಪಕ್ಷದ ಕೆಲವರು ಉದ್ದೇಶ ಪೂರ್ವಕವಾಗಿಯೇ ಸಚಿವರನ್ನು ಕೆರಳಿಸುವಂತೆ ಪ್ರಶ್ನೆ ಮಾಡಿದಲ್ಲದೆ, ಅರ್ಜಿ ಪಡೆದ ಸಂಬಂಧಪಟ್ಟವರಿಗೆ ನೀಡಿದ ನಂತರ ಹೊರಡಲು ಮುಂದಾದಾಗ ಉಢಾಪೆಯಾಗಿ ವರ್ತಿಸಿ,ಕೆಟ್ಟ ಹೆಸರು ತರುವ ಕೆಲಸ ಮಾಡಿದ್ದಾರೆ. ಇದು ಖಂಡನೀಯ. ಅಲ್ಲದೆ ಸೋಷಿಯಲ್ ಮಿಡಿಯಾದಲ್ಲಿ ಇಲ್ಲಸಲ್ಲದ ಸುಳ್ಳು ಹೇಳಿ ಮನ ಬಂದತೆ ಟ್ರೋಲ್ ಮಾಡುತ್ತಿದ್ದಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಕೆ.ಆರ್.ಎಸ್ ಪಕ್ಷದವರ ನಡವಳಿಕೆ ಇದೇ ರೀತಿ ಮುಂದುವರೆದರೆ ನಾವು ಕೂಡ ಎಲ್ಲೆಂದರಲ್ಲಿ ಕೆ.ಆರ್.ಎಸ್.ಪಕ್ಷದವರಿಗೆ ಘೇರಾವ್ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಮಸ್ಯೆಗಳ ಬಗ್ಗೆ ಮನವಿ ನೀಡಲು ಬಂದವರು, ಅದನ್ನು ವೀಡಿಯೋ ಮಾಡುವ ಅಗತ್ಯವೇನಿತ್ತು ?, ತುಮಕೂರಿನ ಜನಸ್ಪಂದನ ಕಾರ್ಯಕ್ರಮಕ್ಕೆ ಮೈಸೂರಿನ ವ್ಯಕ್ತಿ ಬಂದು ಮನವಿ ನೀಡುವ ಅಗತ್ಯವಿದೆಯೇ? ಇದೊಂದು ಷಡ್ಯಂತ್ರವಾಗಿದೆ. ಗೃಹ ಮಂತ್ರಿಗಳಿಗೆ ಕೆಟ್ಟ ಹೆಸರು ತರಬೇಕೆಂದು ನಡೆಸಿರುವ ಹುನ್ನಾರವಾಗಿದೆ.ಇಡೀ ದಿನ ಮದ್ಯಾಹ್ನದ ಊಟವನ್ನು ಮಾಡದೆ ಜನರ ಸಂಕಷ್ಟ ಆಲಿಸಿ ಪರಿಹಾರ ಒದಗಿಸಿದ್ದರೂ, ಸಭೆ ಮುಗಿಸಿ ಹೊರಡುವಾಗ ಬಂದು ಇಲ್ಲಸಲ್ಲದ ಕಿತಾಪತಿ ತೆಗೆದು ಸಾರ್ವಜನಿಕರಲ್ಲಿ ಕೆಟ್ಟ ಅಭಿಪ್ರಾಯ ಮೂಡುವಂತೆ ಮಾಡುತಿದ್ದಾರೆ ಎಂದು ದೂರಿದರು.ಮುಖಂಡರರಾದ ಇಕ್ಬಾಲ್ ಅಹಮದ್ ಮಾತನಾಡಿ, ಪ್ರಜಾಪ್ರಭುತ್ವದ ಅಡಿಯಲ್ಲಿ ಸರಕಾರದ ಸವಲತ್ತುಗಳಿಗೆ ಅರ್ಜಿ ಸಲ್ಲಿಸಲು ಎಲ್ಲರಿಗೂ ಅವಕಾಶವಿದೆ. ಆದರೆ ಕೆ.ಆರ್.ಎಸ್ ಪಕ್ಷದವರು ಉದ್ದೇಶ ಪೂರ್ವಕವಾಗಿಯೇ ಮೊಬೈಲ್ ಹಿಡಿದು, ಬೇಕಾಬಿಟ್ಟಿ ಮಾತನಾಡುವ ಮೂಲಕ ಗೊಂದಲ ಸೃಷ್ಟಿಸಿದ್ದಾರೆ. ಕಾನೂನಿನ ಅಡಿಯಲ್ಲಿ ಎಲ್ಲರಿಗೂ ಸಮಸ್ಯೆ ಪರಿಹಾರಕ್ಕೆ ಅವಕಾಶವಿದೆ. ಆದರೆ ಕೆ.ಆರ್.ಎಸ್ ಪಕ್ಷದ ದುಂಡಾವರ್ತನೆಯನ್ನು ಸಹಿಸುವುದಿಲ್ಲ. ನಮ್ಮ ಪಕ್ಷಕ್ಕೆ 140 ವರ್ಷಗಳ ಇತಿಹಾಸವಿದೆ. ಲಕ್ಷಾಂತರ ಕಾರ್ಯಕರ್ತರಿದ್ದೇವೆ, ತಕ್ಕ ಪಾಠ ಕಲಿಸುವುದು ಅನಿವಾರ್ಯ ಎಂದರು.

ಮುಖಂಡರಾದ ಎನ್.ಗೋವಿಂದರಾಜು ಮಾತನಾಡಿ, ಗೃಹ ಸಚಿವರ ನಲವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ಸೌಮ್ಯ ಸ್ವಭಾವಕ್ಕೆ ಹೆಸರಾದವರು. ಜಿಲ್ಲಾ ಜನ ಸ್ಪಂದನ ಕಾರ್ಯಕ್ರಮ ಸುಗಮವಾಗಿ ನಡೆಯುತ್ತಿರುವಾಗ ಈ ರೀತಿಯ ಕಿರಿಕಿರಿ ಉಂಟು ಮಾಡುವುದು ಸರಿಯಲ್ಲ.ಇದನ್ನು ನಾವು ಖಂಡಿಸುತ್ತೇವೆ ಎಂದರು.

ಕೆಪಿಸಿಸಿ ಪ್ರಧಾನಕಾರ್ಯದರ್ಶಿ ಆರ್.ರಾಮಕೃಷ್ಣ ಮಾತನಾಡಿ, ದೇಶದಲ್ಲಿ ಹಲವಾರು ಸಮಸ್ಯೆಗಳಿಗೆ ಅವುಗಳನ್ನು ಬಿಟ್ಟು ಗೃಹ ಸಚಿವರನ್ನೇ ಟಾರ್ಗೆಟ್ ಮಾಡಿ,ಅವರ ತೇಜೋವಧೆಗೆ ಮುಂದಾಗಿರುವುದು ಖಂಡನೀಯ. ಮೈಸೂರು ಜಿಲ್ಲೆಯಿಂದ ಕಾರ್ಯಕರ್ತರನ್ನು ಎರವಲು ತರುವ ಅಗತ್ಯವೇನಿತ್ತು. ಇದರ ಬಗ್ಗೆ ತನಿಖೆಯಾಗಬೇಕು. ಕೆ.ಆರ್.ಎಸ್ ಪಕ್ಷದ ಚಟುವಟಿಕೆಗೆ ನಾವು ಅಡ್ಡಿ ಪಡಿಸಲ್ಲ.ಆದರೆ ಗೃಹ ಸಚಿವರನ್ನು ಟಾರ್ಗೆಟ್ ಮಾಡಿದರೆ ಮಾತ್ರ ಸಹಿಸಲ್ಲ ಎಂದರು.

ಕೆಪಿಸಿಸಿ ಉಪಾಧ್ಯಕ್ಷ ಮುರುಳೀಧರ ಹಾಲಪ್ಪ ಮಾತನಾಡಿ, ಸರಕಾರದ ಕೆಲಸವಾಗಿರುವ ಜನಸಂಪರ್ಕ ಸಭೆ ವ್ಯವಸ್ಥಿತವಾಗಿ ನಡೆಯುತ್ತಿರುವ ಸಂದರ್ಭದಲ್ಲಿ 750 ಜನರಿಗೆ ಆಗದ ತೊಂದರೆ ಇವರಿಗೆ ಮಾತ್ರ ಆಗಿತ್ತೇ ?, ಕೆ.ಆರ್.ಎಸ್ ಪಕ್ಷದ್ದು ಕೇವಲ ಗಿಮಿಕ್, ಮುಖ್ಯಮಂತ್ರಿಗಳ,ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಅರಣ್ಯ ಸಚಿವರು, ಕಾರ್ಮಿಕ ಸಚಿವರು ಎಲ್ಲರ ಜನಸ್ಪಂದನ ಸಭೆಯಲ್ಲಿಯು ಇದೇ ರೀತಿ ವರ್ತಿಸುತಿದ್ದಾರೆ. ಅರ್ಜಿ ನೀಡುವ ಬದಲು ವಿಡಿಯೋ ಮಾಡಿ ಸೋಷಿಯಲ್ ಮಿಡಿಯಾದಲ್ಲಿ ಅಪಪ್ರಚಾರ ನಡೆಸುತ್ತಿರುವುದು ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸುವರ್ಣಮ್ಮ, ಹೆಚ್.ಸಿ.ಹನುಮಂತಯ್ಯ, ರೇವಣ್ಣ ಸಿದ್ದಯ್ಯ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಅಲ್ಪಸಂಖ್ಯಾತರ ಘಟಕದ ಇರ್ಫಾನ್ ಅಹಮದ್, ಎಸ್ಸಿ ಸೇಲ್‌ನ ಲಿಂಗರಾಜು, ಬ್ಲಾಕ್ ಕಾಂಗ್ರೆಸ್ ಮುಖಂಡರಾದ ಮಹೇಶ, ಫೈಯಾಜ್, ನಾಗಲಕ್ಷ್ಮಿ, ವಿಜಯಲಕ್ಷ್ಮಿ, ಸುಜಾತ, ಪಿ.ಶಿವಾಜಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಶಾಲೆಗೆ ಸೇರಿದರಷ್ಟೇ ಜವಾಬ್ದಾರಿ ಮುಗಿಯಲ್ಲ: ಪ್ರೊ. ವೆಂಕಟೇಶ್ವರಲು

ತುಮಕೂರು– ಒಳ್ಳೆಯ ಶಾಲೆಗೆ ಸೇರಿಸಿದರೆ ಅಷ್ಟೇ ಸಾಲದು, ಮಕ್ಕಳ ಬಗ್ಗೆ ಗಮನ ನೀಡಬೇಕು. ಅವರಿಗೆ ಸಮಯ ನೀಡಿ ಒಳ್ಳೆಯದು, ಕೆಟ್ಟದ್ದು ಯಾವುದೆಂದು ತಿಳಿಸಿ ಸಂಸ್ಕಾರ ಬೆಳೆಸಬೇಕು ಎಂದು ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ಸಲಹೆ ನೀಡಿದರು.




ನಗರದ ಪ್ರೆಸ್ ಕ್ಲಬ್ ಆವರಣ ಆಲದಮರ ಪಾರ್ಕ್‌ನಲ್ಲಿ ನಿರಂಕುಶ ರಂಗ ತಂಡದಿಂದ 25 ದಿನಗಳ ಕಾಲ ನಡೆಯಲಿರುವ ಬೇಸಿಗೆ ರಂಗ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೇಸಿಗೆ ಬಂತೆಂದರೆ ಬೇಸಿಗೆ ಶಿಬಿರ ಶುರು ಮಾಡುತ್ತೇವೆ. ನಾವು ಓದುವಾಗ ಈ ರೀತಿ ಇರಲಿಲ್ಲ, ಇಂತಹ ಅವಕಾಶಗಳೂ ಇರಲಿಲ್ಲ. ಬೀದಿಯಲ್ಲೇ ಇರುತ್ತಿದ್ದೆವು ಎಂದರು.

ಇಂದು ಮಕ್ಕಳನ್ನು ಮುದ್ದಿನಿಂದ ಬೆಳೆಸುತ್ತಿದ್ದೇವೆ. ಆದರೆ ಎರಡೂವರೆ ವರ್ಷಕ್ಕೆ ಅವರಿಂದ ಅಂತರ ಕಾಯ್ದುಕೊಳ್ಳುತ್ತಿದ್ದೇವೆ, ದೂರ ಇರುತ್ತಿದ್ದೇವೆ. ಪ್ಲೇ ಹೋಂ ಅಂತ ಬಿಡುತ್ತಿದ್ದೇವೆ. ಹೀಗಾಗಬಾರದು, ತಂದೆ–ತಾಯಿ ಮಕ್ಕಳ ಜತೆ ಹೆಚ್ಚು ಸಮಯ ಕಳೆಯಬೇಕು ಎಂದರು.

ಉದ್ಯಮಿ ಎಸ್.ಪಿ.ಚಿದಾನಂದ್ ಮಾತನಾಡಿ, ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ಆಗ ಅವರು ಸಂಸ್ಕೃತಿಗೆ ಆದ್ಯತೆ ನೀಡುತ್ತಾರೆ. ಸಂಸ್ಕಾರ, ಸಂಸ್ಕೃತಿಯಿಂದ ಸುಂದರ ಜೀವನ ರೂಪಿಸಬೇಕು ಎಂದು ತಿಳಿಸಿದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಕಲಾವಿದ ಡಾ.ಲಕ್ಷ್ಮಣ್ ದಾಸ್ ಮಾತನಾಡಿ, ಒಳ್ಳೆಯದು ಕಲಿತರೆ ಅದುವೇ ಜೀವನ ಪಾಠ. ಎತ್ತರಕ್ಕೆ ಹೋಗಬೇಕೆಂದರೆ ಎಲ್ಲರ ಹತ್ತಿರ ಹೋಗಬೇಕು, ಎಲ್ಲರೊಂದಿಗೆ ಬೆರೆಯಬೇಕು. ಆ ನಿಟ್ಟಿನಲ್ಲಿ ಇಂತಹ ಶಿಬಿರಗಳು ಉಪಯುಕ್ತವಾಗುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಪ್ರೆಸ್ ಕ್ಲಬ್ ಅಧ್ಯಕ್ಷ ಶಶಿಧರ್ ಎಸ್.ದೋಣಿಹಕ್ಲು, ನಿರ್ದೇಶಕ ಮಧು ಇಂಗಳದಾಳ್, ಶಿಬಿರದ ನಿರ್ದೇಶಕ ಹೇಮಂತ್ ವೈ.ಎಂ., ಮಾರುತೇಶ್ ಮತ್ತಿತರರು ಉಪಸ್ಥಿತರಿದ್ದರು.

# "ಸಾಹಿತ್ಯ ಕ್ಷೇತ್ರದ ಬೆಳವಣಿಗೆಗೆ ಆಸಕ್ತ ಮನಸ್ಸುಗಳ ಪ್ರೋತ್ಸಾಹ ಅಗತ್ಯ

ತಿಪಟೂರು : ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳು ಬೆಳವಣಿಗೆ ಹೊಂದಬೇಕಾದರೆ ಪ್ರೋತ್ಸಾಹ ನೀಡುವ ಆಸಕ್ತ ಮನಸ್ಸುಗಳು ಮುಖ್ಯ ಎಂದು ಖ್ಯಾತ ಸಾಹಿತಿ ಹಾಗೂ ಕವಿ ಬಿ.ಆರ್ ಲಕ್ಷ್ಮಣ್ ರಾವ್ ತಿಳಿಸಿದರು.



ನಗರದ ಹೊರವಲಯದ ನಂದಪಾರಂ ಹೌಸ್ ಸಭಾಂಗಣದಲ್ಲಿ ಆಯೋಜಿಸಿದ ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘದ ಬೆಳ್ಳಿ ಹಬ್ಬದ ಅಂಗವಾಗಿ ಗೌರವ ಸದಸ್ಯತ್ವ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿದ ಅವರು ಮಾತನಾಡಿ ಕಲೆ ಸಾಹಿತ್ಯ ಸಾಮಾಜಿಕ ಕ್ಷೇತ್ರದ ಆಸಕ್ತಿ ಉಳ್ಳ ಮನಸ್ಸುಗಳಿಂದ ಪ್ರೋತ್ಸಾಹ ಸಾಧ್ಯವಾಗುತ್ತದೆ. ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ಕಲೆ ಸಾಹಿತ್ಯ ಸೇವೆಯ ಮೂಲಕ ಇಪ್ಪತ್ತೈದು ವಸಂತ ಪೂರೈಸಿರುವುದು ಶ್ಲಾಘನೀಯ.ನಾಡಿನ ಹೆಸರಾಂತ ಕವಿಗಳು ಸಾಹಿತಿಗಳನ್ನ ಕಲ್ಪತರು ನಾಡಿಗೆ ಕರೆಸಿ ವಿದ್ಯಾರ್ಥಿಗಳಿಗೆ ಸಾರ್ವಜನಿಕರಿ ಉತ್ತಮ ಸಾಹಿತ್ಯ ವಿಚಾರಧಾರೆಗಳನ್ನ ನೀಡುತ್ತಿರುವ ಪರಂಪರೆ ಮುಂದುವರೆಸುವ ಕೆಲಸ ಮಾಡಬೇಕು.ಬೆಳ್ಳಿ ಹಬ್ಬವನ್ನ ವಿಶೇಷವಾಗಿ ಆಚರಣೆ ಮಾಡ ಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಶಾಸಕ ಕೆ.ಷಡಕ್ಷರಿ ಮಾತನಾಡಿ ಸಂಘಸಂಸ್ಥೆಗಳ ಹುಟ್ಟಿಹಾಕುವುದಕ್ಕಿಂತ ಅವುಗಳನ್ನ ಸಾಮಾಜಿಕವಾಗಿ ಬೆಳೆಸುವ ಕೆಲಸ ಮಾಡುವುದು ಮುಖ್ಯ.ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ 25 ವರ್ಷಗಳ ಹಿಂದೆ, ಜ್ಯೋತಿಬೆಳಗಿಸುವಾಗ ಉತ್ತವಾದ ಕೆಲಸಗಳ ಮೂಲಕ ಹೆಸರುಗಳಿಸಲಿ.ಕಲೆ ಸಾಹಿತ್ಯ ಸಾಂಸ್ಕೃತಿಕ ಸಾಮಾಜಿಕ ಸೇವೆ ಮಾಡಲಿದೆ ಎಂದು ಆಶಯ ವ್ಯಕ್ತಪಡಿಸಿದ್ದೆ. ಅದರಂತೆ ಸಂಘ ಉತ್ತಮದಾರಿಯಲ್ಲಿ ಸಾಗಿ ಬೆಳ್ಳಿ ಹಬ್ಬ ಆಚರಿಸುತ್ತಿದೆ.ಇನ್ನೂ ಹೆಚ್ಚಿನ ಸಾಮಾಜಿಕ ಸೇವೆ ಮಾಡಲಿ ಎಂದು ತಿಳಿಸಿದರು.

ಖ್ಯಾತ ಪತ್ರಕರ್ತರಾದ ವೆಂಕಟನಾರಾಯಣ್ ಮಾತನಾಡಿ ಯುವ ಜನರಲ್ಲಿ ಸಾಹಿತ್ಯ ಆಸಕ್ತಿ ಕಡಿಮೆಯಾಗುತ್ತಿದೆ,ಕಲೆ ಸಾಹಿತ್ಯ ಗೀಳು ಹೆಚ್ಚಿವ ಕೆಲಸವನ್ನ ಸಂಘಸಂಸ್ಥೆಗಳು ಮಾಡಬೇಕು,ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬೆಳ್ಳಿ ಹಬ್ಬದ ಅಂಗವಾಗಿ ಗೌರವ ಸದಸ್ಯತ್ವ ನೀಡುವ ವಿನೂತನ ಕಾರ್ಯಕ್ರಮ ಸ್ವಾಗತಾರ್ಹ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನ್ ಕುಮಾರ್.ಇಒ ಸುದರ್ಶನ್.ಗ್ರೇಡ್ 2ತಹಸೀಲ್ದಾರ್. ಜಗನ್ನಾಥ್.ಸಂಘದ ಅಧ್ಯಕ್ಷರಾದ ನಾಗರಾಜ್ ಲಾಯರ್ ಲಿಂಗಪ್ಪ.ಸಂಸ್ಥಾಪಕರಾದ ಎನ್ .ಬಾನುಪ್ರಶಾಂತ್,ಖ್ಯಾತ ಮಕ್ಕಳ ಸಾಹಿತಿ ನಾಗರಾಜ ಶೆಟ್ಟಿ ಪ್ರಾಂಶುಪಾಲರಾದ ಕೆ.ಎಂ ರೇಣುಕಯ್ಯ. ಉದಯರವಿ ಬ್ಯಾಂಕ್ ಅಧ್ಯಕ್ಷ ಕೆ.ಎಂ ರಾಜಣ್ಣ ಉಪಸ್ಥಿತರಿದರು."





# 4 ಕೋಟಿ ರೂ. ಕಾಮಗಾರಿಗೆ ಸುರೇಶ್‌ಗೌಡ ಚಾಲನೆ

ತುಮಕೂರು: ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶಾಸಕ ಬಿ.ಸುರೇಶ್‌ಗೌಡರು ಭಾನುವಾರ ನಾಲ್ಕು ಕೋಟಿ ರೂ.ಗಳಿಗೂ ಹೆಚ್ಚಿನ ಅಂದಾಜು ವೆಚ್ಚದಲ್ಲಿ ನಾನಾ ಕಾಮಗಾರಿಗಳಿಗೆ ಚಾಲನೆ ನೀಡಿದರು.



ಹೆಬ್ಬೂರು ಹೋಬಳಿಯ ಕಣಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗರಗದಕುಪ್ಪೆ, ತಿಮ್ಮಸಂದ್ರ, ಕಣಕುಪ್ಪೆ, ಎಂ.ಎಸ್. ಪಾಳ್ಯ, ಕಾಚೇನಹಳ್ಳಿ, ಬೈಚೇನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಿಕ್ಕಗೊಲ್ಲಹಳ್ಳಿ, ಸೀಗೆಪಾಳ್ಯ, ಶಾಂತಪುರ, ಬಿಸಿಲಹಳ್ಳಿ ಹಾಗೂ ರಾಮಕೃಷ್ಣಾಪುರ ಗ್ರಾಮಗಳಲ್ಲಿ 2025–26ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ ಸುಮಾರು 4.20 ಕೋಟಿ ಲಕ್ಷ ರೂ.ಗಳಲ್ಲಿ ಸಿ.ಸಿ. ರಸ್ತೆ ಮತ್ತು ಸಿ.ಸಿ. ಚರಂಡಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಣಕುಪ್ಪೆ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಮುಖಂಡರಾದ ಶಿವಕುಮಾರ್, ಮಾಸ್ತಿಗೌಡರು, ಕೆ.ಬಿ. ರಾಜಣ್ಣ, ವಕೀಲ ನಾಗರಾಜು, ಗಿರೀಶ್, ವೆಂಕಟೇಶ್, ಜಗಣ್ಣ, ಕುಮಾರ್, ಈರಣ್ಣ, ಬಾಬಣ್ಣ, ಕೇಶವಮೂರ್ತಿ, ಗೋವಿಂದರಾಜು, ಪಾಪೇಗೌಡ, ಮುನಿಸ್ವಾಮಿ, ಅನಿಲ್, ಅಜ್ಗರ್, ಮಹೇಶ್, ಈಶ್ವರ್, ಗೋವಿಂದಪ್ಪ, ಪಾಪಣ್ಣ, ಕಾಂತರಾಜ್, ಶಾಂತಪುರ ರವಿ, ಸುರೇಶ, ರವಿಕುಮಾರ್, ನಟರಾಜ್, ಪ್ರದೀಪ್, ನಾರಾಯಣಪ್ಪ, ಮಂಚಕಲ್ಲುಕುಪ್ಪೆ ರಾಜೇಶ್, ಲೋಕೋಪಯೋಗಿ ಇಲಾಖೆಯ ಎಇಇ ಗೋವಿಂದರಾವ್, ಇಇ ಉದಯ್, ಗುತ್ತಿಗೆದಾರ ಮೈದಾಳ ಮಂಜಣ್ಣ ಹಾಗೂ ಗ್ರಾಮಸ್ಥರು ಹಾಜರಿದ್ದರು.

## ಸಣ್ ಸುದ್ದಿ

# ಡಾ: ಬಿ.ಆರ್. ಅಂಬೇಡ್ಕರ್ ಜಯಂತಿ : ಮಾಂಸ ಮಾರಾಟ ನಿಷೇಧ

ತುಮಕೂರು: ಡಾ: ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಪ್ರಯುಕ್ತ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮಾಂಸ ಮಾರಾಟ ನಿಷೇಧಿತ ದಿನವೆಂದು ಘೋಷಿಸಲ್ಪಟ್ಟಿದೆ.

ಜಯಂತಿ ಅಂಗವಾಗಿ ಏಪ್ರಿಲ್ 13ರ ಸಂಜೆ 5 ಗಂಟೆಯಿಂದ ಏಪ್ರಿಲ್ 14ರ ಮಧ್ಯರಾತ್ರಿ 12 ಗಂಟೆಯವರೆಗೆ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ಕಸಾಯಿಖಾನೆ ಮುಚ್ಚಲು, ಮಾಂಸ ಮಾರಾಟ ಮಾಡುವುದು, ಸಂಗ್ರಹಣೆ ಮಾಡುವುದನ್ನು ನಿಷೇಧಿಸಿದೆ. ಈ ಅವಧಿಯಲ್ಲಿ ಕಸಾಯಿಖಾನೆ ತೆರೆಯಬಾರದು ಹಾಗೂ ಮಾಂಸ ಮಾರಾಟ ಮಾಡಬಾರದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈತರ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿ

ತುಮಕೂರು: ತೋಟಗಾರಿಕೆ ಇಲಾಖೆಯು ರಾಜ್ಯದ ವಿವಿಧ ಭಾಗಗಳಲ್ಲಿನ 10 ತೋಟಗಾರಿಕೆ ತರಬೇತಿ ಕೇಂದ್ರಗಳಲ್ಲಿ 2026ರ ಮೇ 2 ರಿಂದ 2027ರ ಫೆಬ್ರವರಿ 28ರವರೆಗೆ ರೈತ ಮಕ್ಕಳಿಗೆ 10 ತಿಂಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಏಪ್ರಿಲ್ 20ರವರೆಗೆ ವಿಸ್ತರಿಸಲಾಗಿದೆ. ತುಮಕೂರು ಜಿಲ್ಲಾ ವ್ಯಾಪ್ತಿಯ ಆಸಕ್ತ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಏಪ್ರಿಲ್ 20ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 0816–2278647ನ್ನು ಸಂಪರ್ಕಿಸಬೇಕೆಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.16ರಂದು ವಾಹನಗಳ ಬಹಿರಂಗ ಹರಾಜು

ತುಮಕೂರು: ಗುಬ್ಬಿ ಪೊಲೀಸ್ ಠಾಣಾ ಆವರಣದಲ್ಲಿ ನಿಲ್ಲಿಸಿರುವ ಠಾಣೆಯ ವಿವಿಧ ಪ್ರಕರಣಗಳಲ್ಲಿ ಅಮಾನತ್ತುಪಡಿಸಿಕೊಂಡಿದ್ದ 9 ದ್ವಿಚಕ್ರ ವಾಹನ ಹಾಗೂ 1 ಬಸ್ ಅನ್ನು ಏಪ್ರಿಲ್ 16ರಂದು ಬೆಳಿಗ್ಗೆ 10 ಗಂಟೆಗೆ ಗುಬ್ಬಿ ಆರಕ್ಷಕ ವೃತ್ತ ನಿರೀಕ್ಷಕರ ಸಮಕ್ಷಮದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಆಸಕ್ತರು ಹರಾಜಿನಲ್ಲಿ ಪಾಲ್ಗೊಂಡು ವಾಹನಗಳನ್ನು ಪಡೆಯಬಹುದಾಗಿದೆ ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

## ಅಪರಿಚಿತ ಶವ ಪತ್ತೆ

ತುಮಕೂರು: ಕ್ಯಾತ್ಸಂದ್ರ ಪೊಲೀಸ್ ಠಾಣೆ ವ್ಯಾಪ್ತಿ ಜಾಸ್ ಟೋಲ್ ಬಳಿಯ ಹೊಂಗೆ ಮರದ ಕೆಳಗೆ ಏಪ್ರಿಲ್ 13ರಂದು ಸುಮಾರು 35 ವರ್ಷದ ಅಪರಿಚಿತ ವ್ಯಕ್ತಿಯ ಶವವೊಂದು ಪತ್ತೆಯಾಗಿದ್ದು, ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ.

ಮೃತನು 163 ಸೆಂ.ಮೀ. ಎತ್ತರ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಶರೀರ ಹೊಂದಿದ್ದು, ಎದೆಯ ಮೇಲೆ ಹಳೆ ಗಾಯದ ಗುರುತು ಇರುತ್ತದೆ. ಮೃತನ ಮೈಮೇಲೆ ಗೋಲ್ಡ್ ಬಣ್ಣದ ಅರ್ಧ ತೋಳಿನ ಅಂಗಿ ಹಾಗೂ ಕಾಫಿ ಬಣ್ಣದ ಪ್ಯಾಂಟ್ ಇರುತ್ತದೆ. ಮೃತನ ವಾರಸುದಾರರು ಯಾರಾದರೂ ಇದ್ದಲ್ಲಿ ದೂ.ವಾ.ಸಂ.0816–2281124, 0816–2281120, ಮೊ.ಸಂ.9480802952–33–00ಯನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

## ಮಣಿಪಾಲ ಕ್ರೀಡಾ ಕೂಟದಲ್ಲಿ ಶಿವ ಕಮಲೇಶ್ ಪಂದ್ಯದ ಅತ್ಯುತ್ತಮ ಬೌಲರ್



ತುಮಕೂರು: ನಗರದ ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವಿದ್ಯಾರ್ಥಿಗಳು ಮಣಿಪಾಲದಲ್ಲಿ ನಡೆದ ದಕ್ಷಿಣ ಭಾರತೀಯ ಮಣಿಪಾಲ ಕ್ರೀಡಾಕೂಟ 2026ರಲ್ಲಿ ಬಾಲಕಿಯರ ಥ್ರೋ ಬಾಲ್ ತಂಡ ಹಾಗೂ ಬಾಲಕರ ಕ್ರಿಕೆಟ್ ತಂಡಗಳ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಮತ್ತು ಅಥ್ಲೆಟ್ ವಿಭಾಗದಲ್ಲಿ ಸ್ಪರ್ಷಿತ್ ಎಂಬ ವಿದ್ಯಾರ್ಥಿ 400 ಮೀ. ನಲ್ಲಿ ಪ್ರಥಮ 200 ಮೀಟರ್ ನಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇದರ ಜೊತೆಗೆ ಕ್ರಿಕೆಟ್ ನಲ್ಲಿ ಶಿವಕಮಲೇಶ್ ಎಂಬ ವಿದ್ಯಾರ್ಥಿ ಪಂದ್ಯದ ಅತ್ಯುತ್ತಮ ಬೌಲರ್ ಆಗಿ ಬಹುಮಾನವನ್ನು ಪಡೆದುಕೊಂಡಿದ್ದಾರೆ.

## ಕೆ,ಎನ್ ರಾಜಣ್ಣ ಅವರ ಹುಟ್ಟು ಹಬ್ಬದ ಝಲಕ್







ಮಾಜಿ ಸಚಿವ, ಶಾಸಕ ಕೆ.ಎನ್. ರಾಜಣ್ಣಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ನಾಯಕ, ಶಾಸಕ ಬಿ.ಸುರೇಶ್‌ಗೌಡರು ಸೋಮವಾರತುಮಕೂರಿನಲ್ಲಿಕೆ.ಎನ್. ರಾಜಣ್ಣಅವರನ್ನು ಭೇಟಿ ಮಾಡಿಜನ್ಮದಿನದ ಶುಭಾಶಯಕೋರಿದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.